ನವೋದಯ ಪ್ರಚಾರ ಪುಸ್ತಕಮಾಲೆ—೮

ಕಡೆಂಗೋಡ್ಲು ಶಂಕರ ಭಟ್ಟ

ಬಡೆಕ್ಕಿಲ ಕೃಷ್ಣ ಭಟ್ಟ

ಮಹಾತ್ಮಾ ಗಾಂಧಿ
ಮೆಮೋರಿಯಲ್ ಕಾಲೇಜು
ಉಡುಪಿ 2

ನವೋದಯ ಪ್ರಚಾರ ಪುಸ್ತಕ ಮಾಲೆ–೮

ಕಡೆಂಗೋಡ್ಲು ಶಂಕರ ಭಟ್ಟ

ಬಡೆಕ್ಕಿಲ ಕೃಷ್ಣ ಭಟ್ಟ

ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜು
ಉಡುಪಿ–೨.

ಸಂಪಾದಕ ಮಂಡಳಿ

ಪ್ರೊ| ಕು. ಶಿ. ಹರಿದಾಸ ಭಟ್ಟ, ಎಂ. ಎ., ಪ್ರಧಾನ ಸಂಪಾದಕ.
ಶ್ರೀ ಎಸ್. ಕೆ. ಶ್ರೀಪತಿ ಆಚಾರ್ಯ, ಎಂ. ಎ., ವಿದ್ವಾನ್.
ಶ್ರೀ ಎನ್. ತಿರುಮಲೇಶ್ವರ ಭಟ್ಟ, ಎಂ. ಎ.

ಮೊದಲನೆಯ ಮುದ್ರಣ ೧೯೫೯
ಎರಡನೆಯ ಮುದ್ರಣ ೧೯೭೧

ಬೆಲೆ : ೫೦ ಪೈಸೆ

ಮುದ್ರಕರು : ಕೆ. ಹೊನ್ನಯ್ಯ ಶೆಟ್ಟಿ
ನವಯುಗ ಪ್ರೆಸ್, ಉಡುಪಿ.

ಸಂಪಾದಕರ ಮಾತು

ನವೋದಯದ ಹೊಸಲಲ್ಲಿ ನಿಂತಿರುವ ನಾಡಿನ ಸಹೃದಯರಿಗೆ ನಮ್ಮ ಈ ಪ್ರಚಾರೋಪನ್ಯಾಸ ಮಾಲೆಯಿಂದ ಪ್ರಯೋಜನವಾಗ ಬಹುದೆಂಬ ಭಾವನೆಯಿಂದ ನಾವು ಈ 'ನವೋದಯ ಪುಸ್ತಕ ಮಾಲೆ'ಯನ್ನು ಆರಂಭಿಸಿದ್ದೇವೆ. ನಮ್ಮ ಕಾಲೇಜಿನಂಥ ಉಚ್ಚ ಶಿಕ್ಷಣಾಲಯಗಳು ಜನತೆಯ ಸಂಪರ್ಕವನ್ನು ಬೆಳೆಸ ಬೇಕೆಂದೂ, ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುವುದಷ್ಟೇ ಅಲ್ಲದೆ ದೇಶದ ಮುನ್ನಡೆಗೆ ಮುಖ್ಯವಾದ ಸಾರ್ವಜನಿಕ-ಸಾಮಾ ಜಿಕ ಶಿಕ್ಷಣ ಕ್ಷೇತ್ರದಲ್ಲಿಯೂ ಪಾತ್ರವಹಿಸಬೇಕೆಂದೂ ನಾವು ಭಾವಿಸಿದ್ದೇವೆ. ಪ್ರತಿವರ್ಷವೂ ಇದಕ್ಕೋಸ್ಕರ ನಾವು ಮೂರು ದಿನಗಳ ಸಾಂಸ್ಕೃತಿಕ ಉತ್ಸವವನ್ನು ಏರ್ಪಡಿಸಿ, ವಿಶ್ವದ ಸಾಂಸ್ಕೃತಿಕ ರಂಗದಲ್ಲಿ ಪ್ರಮುಖರಾದವರ ಸ್ಥೂಲ ಪರಿಚಯ ವನ್ನು ವಿದ್ಯಾರ್ಥಿಗಳಿಗೂ ಸಾರ್ವಜನಿಕರಿಗೂ ಮಾಡಿಸುತ್ತಿ ದ್ದೇವೆ. "ಮೊದಲು ಮನೆಯಲ್ಲಿ ದೀಪಹಚ್ಚಿ ಮತ್ತೆ ಮಸೀದಿ ಯಲ್ಲಿ ಹಚ್ಚು" ಎಂಬಂತೆ ನಾವು ಆರಂಭದಲ್ಲಿ ಕರ್ನಾಟಕದ ಕವಿ-ಲೇಖಕರ ಪರಿಚಯ ಮಾಡಿಸಲೆಳಸಿದ್ದೇವೆ. ಈ ಉಪ ನ್ಯಾಸಗಳ ಪ್ರಯೋಜನವು ಎಲ್ಲರಿಗೂ ಆಗಲೆಂದು ಇವನ್ನು ಪ್ರಚಾರ ಪುಸ್ತಕಗಳಾಗಿ ಮುದ್ರಿಸಬೇಕೆಂದು ನಿರ್ಧರಿಸಿದುದರ ಫಲವಾಗಿ ಈ ಪುಸ್ತಕವು ಪ್ರಕಟವಾಗುತ್ತಿದೆ.

೧೯೫೯

ಎಚ್. ಸುಂದರ ರಾವ್,

ಪ್ರಧಾನ ಸಂಪಾದಕ.

ನವೋದಯ ಪ್ರಚಾರ—ಇಂದು

ನಮ್ಮ ನವೋದಯ ಪ್ರಚಾರ ಪುಸ್ತಕ ಮಾಲೆ ಕಾಲೇಜಿನ ವಾರ್ಷಿಕ ಸಾಹಿತ್ಯೋತ್ಸವ ಸಂದರ್ಭದಲ್ಲಿ ಮಾಡಿದ ಭಾಷಣಗಳನ್ನು ಮಾತ್ರವೇ ಅಲ್ಲದೆ ಕನ್ನಡ ಸಾಹಿತಿ-ಕಲಾವಿದರ ಕುರಿತು ಲಿಖಿತ ಪ್ರಬಂಧಗಳನ್ನೂ ಪ್ರಕಟಿಸಲು ತೊಡಗಿ ಹದಿನೈದು ವರ್ಷಗಳಾದುವು. 'ಲಾಭ ಬೇಡ, ನಷ್ಟವಿಲ್ಲ' ಎಂಬ ಆರ್ಥಿಕ ತಳಹದಿಯಲ್ಲಿ ಕಾಲೇಜು ಕೈಗೊಂಡ ಈ ಪ್ರಕಟನ ಸಾಹಸಕ್ಕೆ ಕನ್ನಡಿಗರು ಸಾಕಷ್ಟು ಪ್ರೋತ್ಸಾಹ ನೀಡಿದ್ದಾರೆ.

ಪ್ರಕಟನೆಯ ಬಗ್ಗೆ ನಾವು ಯಾವ ನಿಯಮಿತತೆಯನ್ನೂ ಇಟ್ಟುಕೊಂಡಿಲ್ಲವಾದರೂ ಇದುವರೆಗೆ ಸುಮಾರು ಹದಿನೈದು ಪುಸ್ತಕಗಳು ಅಚ್ಚಾಗಿವೆ. ಅದರಲ್ಲಿ ಎಷ್ಟೋ ತೀರಿವೆ. ಮುಂಬರುವ ಜಿಲ್ಲಾ ಸಾಹಿತ್ಯ ಸಮ್ಮೇಳನದ ನೆಪದಲ್ಲಿ ಮತ್ತೊಮ್ಮೆ ಈ ಜಿಲ್ಲೆ ಕನ್ನಡ ನಾಡಿನ ಸೇವೆಗೆ ಅಣಿಗೊಳಿಸಿದ ಮಹನೀಯರ ಪರಿಚಯವನ್ನು ಪ್ರಾಂಕ್ತವಾಗಿ ಪ್ರಕಟಿಸಬೇಕೆಂಬ ನಮ್ಮ ಆಶಯ ದೊಡ್ಡದೆ. ಹಲವು ಮಂದಿ ಲೇಖಕರು ಇದರಲ್ಲಿ ಸಹಕರಿಸಿದ್ದಾರೆ. ಇದುವರೆಗೆ ಪ್ರಕಟಿತವಾದ (ಮರುಪ್ರಕಟಿತವಾದ) ಗೋವಿಂದ ಪೈ, ಕಡೆಂಗೋಡ್ಲು. ಸೇಡಿಯಾಪು, ಕಾರಂತ ಅವರ ಜತೆಗೆ ಮುಳಿಯ ತಿಮ್ಮಪ್ಪಯ್ಯ, ಪಂಜೆ ಮಂಗೇಶ ರಾವ್, ಹುರುಳಿ ಭೀಮರಾವ್, ಉಗ್ರಾಣ ಮಂಗೇಶ ರಾವ್, ಎಸ್ ವೆಂಕಟರಾಜ, ಕಯ್ಯಾರ ಕಿಞ್ಞಣ್ಣ ರೈ, ಅವರನ್ನೂ


ಪೋಣಿಸಿದ ಬಳಿಕ ಜಿಲ್ಲೆಯ ಸಾಹಿತ್ಯ ವ್ಯವಸಾಯದ ಒಂದು ಸಮಗ್ರ ಚಿತ್ರ ಮೂಡುವುದೆಂದು ನಾವು ಆಶಿಸಿದ್ದೇವೆ.

ಪುಸ್ತಕ ಪ್ರಕಟನೆಯ ಲೇಖಕರು ಮಾಲೆಯ ಇತಿಮಿತಿ ಮತ್ತು ನಿಯಮಿತ ಅವಧಿಯೊಳಗೇನೆ ತಮ್ಮ ಕೃತಿಯನ್ನು ರಚಿಸಿ ಉಪಕರಿಸಿದ್ದಾರೆ. ಅವರಿಗೂ, ಸುಂದರವಾಗಿ ಮುದ್ರಿಸಿಕೊಟ್ಟ ನವಯುಗ ಪ್ರೆಸ್, ಅವರಿಗೂ ನಮ್ಮ ಕೃತಜ್ಞತೆ.

ಸಪ್ಟೆಂಬರ–18, 1971 **ಕು. ಶಿ. ಹರಿದಾಸ ಭಟ್ಟ**

ಪ್ರಧಾನ ಸಂಪಾದಕ

ಕಡೆಂಗೋಡ್ಲು ಶಂಕರ ಭಟ್ಟ



ಕಡೆಂಗೋಡ್ಲು ಶಂಕರ ಭಟ್ಟ

೧

ಎಲ್ಲವಳಿವುದು, ಲೋಕವೆಂಬುದಿದು ಬರಿಸುಳ್ಳು
ಅಳಿವುದನು, ಬಿಟ್ಟಳಿಯದಿರುವ ಹುರುಳನು ಹಿಡಿದು
ಬಾಳಬೇಕೆನ್ನುವರು; ಹುಟ್ಟು ಹರಿದಳಿಯದೇ?
ಅಳಿದರಳಿಯಲಿ, ಅಳಿವು ಜನ್ಮಗಳ ತರುತಿರಲಿ
ಅಳಿಯಾಗಿ, ಗಿಳಿಯಾಗಿ, ಹುಟ್ಟೂರ ನುತಿಸುವೆನು
ಎಲರಾಗಿ, ಅಲರಾಗಿ ಹುಟ್ಟೂರನರ್ಚಿಪೆನು
ಚಿಗುರಾಗಿ, ಲತೆಯಾಗಿ ಹುಟ್ಟೂರ ತಳ್ಕೈಪೆ
ಜಗದೊಳಿನ್ನಯ ಬಾಳ್ಕೆ ಸಫಲವಾಯ್ತೆಂದೆಣಿಪೆ

ತನ್ನ ಹಾಗೂ ಸುತ್ತಲಿನದರ ನಶ್ವರತೆಯನ್ನು ಕಂಡು ಕೊಂಡು, ತನ್ನ ಬದುಕನ್ನು ಬೆಳೆಸಿಕೊಂಡ, ತಾಯಿನುಡಿ–ತಾಯಿನಾಡಿಗಾಗಿ ಬದುಕನ್ನು ತೇಯುವ ಮನೋಧರ್ಮವನ್ನು ರೂಪಿಸಿಕೊಂಡ ಈ ಕವಿ ಯಾರು? ಅಂತಹ ಬದುಕಿನಲ್ಲಿ ಸವಿಯನ್ನೂ—ಸೊಗವನ್ನೂ ಕಂಡುಕೊಂಡ ಜೀವಿಯ ನೆಲೆಯನ್ನು ಅರಿತುಕೊಳ್ಳುವುದು ಆನಂದದ ಸಂಗತಿಯಷ್ಟೇ ಅಲ್ಲ; ಆತ್ಮಕಲ್ಯಾಣದ ಹೆದ್ದಾರಿಯೂ ಹೌದು! ಈ ಕವಿತೆಯನ್ನು ಕಟ್ಟಿದವರು ಶ್ರೀ ಕಡೆಂಗೋಡ್ಲು ಶಂಕರ ಭಟ್ಟರು. ಮೇಲೆ ಉದಹರಿಸಿದ ಸಾಲುಗಳನ್ನು ಅವರ 'ಹುಟ್ಟುನಾಡು' ಎಂಬ ಕವನದಿಂದ ಆರಿಸಿಕೊಳ್ಳಲಾಗಿದೆ. ಶಂಕರ ಭಟ್ಟರು ದಕ್ಷಿಣ

ಕನ್ನಡ ಜಿಲ್ಲೆಯವರು. ವಯಸ್ಸು ಐವತ್ತರ ಮೇಲೆ. ಹುಟ್ಟಿದ್ದು ಈಗ ಕೇರಳಕ್ಕೆ ಸೇರಿದ ಕಾಸರಗೋಡು ತಾಲೋಕಿನಲ್ಲಿ. ಅವರ ಸೇವಾಕ್ಷೇತ್ರ ಅಖಂಡ ಕರ್ನಾಟಕ; ಹೆಂಡತಿ, ಐದು ಮಂದಿ ಮಕ್ಕಳು, ಬೆನ್ನ ಹಿಂದೆ ಬಂದ ಇಬ್ಬರು ಸೋದರಿಯರೂ ಇದ್ದಾರೆ: ಚೊಕ್ಕ-ಚಿಕ್ಕ ಸಂಸಾರ. ಕೈಯಾಗಿ, ಕಣ್ಣಾಗಿ ಬಂದ ತಮ್ಮಂದಿರನ್ನು ಕಳೆದುಕೊಂಡಿದ್ದಾರೆ. ಆ ಎದೆಯ ಕೊರಗನ್ನು, ಎದೆಯೊರತೆಯನ್ನು ಹಾಡಿನ ರೂಪದಲ್ಲಿ ಹರಿಸಿ, ಎದೆಯ ಭಾರವನ್ನು ಕಡಿಮೆಮಾಡಿಕೊಂಡಿದ್ದಾರೆ—ಶ್ರೀಮಂತರೆಂದು ಕರೆಯುವಂತಿಲ್ಲವಾದರೂ, ಉಂಡುಟ್ಟು ಸುಖವಾಗಿ ಇರಬಲ್ಲ ಹವ್ಯಕ ಬ್ರಾಹ್ಮಣ ಮನೆತನಕ್ಕೆ ಸೇರಿದವರು. ಗುಣವನ್ನೇ ಮಾನದಂಡವಾಗಿ ಬಳಸಿದಲ್ಲಿ ಶ್ರೀಮಂತಿಕೆಗೆ ಬರವಿಲ್ಲವೆಂದು ಧಾರಾಳವಾಗಿ ಹೇಳಬಹುದು.

ಅವರ ಕುರಿತು, ಅವರ ಕೃತಿಗಳ ಕುರಿತು ನಾಲ್ಕು ಮಾತುಗಳನ್ನು ಬರೆಯುತ್ತಿದ್ದೇನೆ.

ಶಂಕರ ಭಟ್ಟರು ನನಗೆ ಬಂಧುಗಳು; ಆಪ್ತ ವರ್ಗಕ್ಕೆ ಸೇರಿದವರು. ನನ್ನ ಕೈಹಿಡಿದಾಕೆ ಮತ್ತು ಅವರ ಸೌಭಾಗ್ಯವತಿ ಅಕ್ಕ-ತಮ್ಮಂದಿರ ಮಕ್ಕಳು. ನನ್ನ ತಾಯಿಯ ಕಡೆಯಿಂದ ಅವರ ಮನೆಯಾಕೆಗೆ ನಾನು ಚಿಗಪ್ಪನಾಗಬೇಕು. ಸಮುದ್ರದ ನೆಂಟಸ್ತನ, ಉಪ್ಪಿಗೆ ಬಡತನ ಎನ್ನುವ ಸ್ಥಿತಿ ನನ್ನದು. ಈ ಸಂಬಂಧ ವಿಶುದ್ಧವಾದ ವಿಮರ್ಶೆಗೆ ಅಡ್ಡಿಯಾಗದಿರದು ಎಂಬ ಅನುಮಾನ ನನ್ನನ್ನು ಬಾಧಿಸುತ್ತಲೇ ಇದೆ. ಈ ಸಂಬಂಧಕ್ಕಿಂತಲೂ ಆಳವಾದ್ದು, ಪ್ರಗಾಢವಾದ್ದು ಅವರ ಕೃತಿಗಳ ಕೂಡೆ ನನಗಿರುವ ಸಂಬಂಧ. ನಾನು ಎಂದೂ ಅವರಲ್ಲಿ ಸಲುಗೆಯನ್ನು ಬೆಳೆಸಿದವನಲ್ಲ. ಆದರೆ ಅವರ ಕೃತಿಗಳ ಕೂಡೆ ನಿಕಟವರ್ತಿ

ಯಾಗಿ ಸುಳಿದಿದ್ದೇನೆ. ಅದು ಕಾರಣ ಅವರ ಕುರಿತ, ಅವರ ಕೃತಿಗಳ ಕುರಿತ ನನ್ನ ಅಭಿಮತ, ಅಲಿಪ್ತ, ನಿರ್ಲಿಪ್ತ!

ನಾನು ಅವರನ್ನು ಮೊದಲು ನೋಡಿದ್ದು ಅವರ ಮದುವೆಯಲ್ಲಿ! ಅದು ಸಂದು ಇಂದಿಗೆ ಮೂವತ್ತು ವರ್ಷಗಳು ಆದುವು. ನನಗೆ ಆರೋ—ಏಳೋ ವಯಸ್ಸು! ಯಾವ ದೃಷ್ಟಿಯಿಂದಲೂ ಅವರನ್ನು ಸೂಕ್ಷ್ಮವಾಗಿ ಅಭ್ಯಸಿಸುವ ಮನೋಧರ್ಮ ನನ್ನಲ್ಲಿ ಮೂಡಿರಲಿಲ್ಲ. ಆದರೆ ಅಷ್ಟು ಹೊತ್ತಿಗಾಗಲೇ ಅವರು 'ರಾಷ್ಟ್ರಬಂಧು'ವಿನ ಸಂಪಾದನ ಕಾರ್ಯದ ಹೊರೆ ಹೊತ್ತಿದ್ದರು. ಮದುವೆಯ ನೆವವನ್ನು ಮುಂದೂಡಿ 'ರಾಷ್ಟ್ರಬಂಧು' ಒಂದುವಾರ ರಜ ತೆಗೆದುಕೊಂಡಿತು. ಆ ವಿಷಯವನ್ನು ಮದುವೆಯಲ್ಲಿ ಸೇರಿದ ಹಿರಿಯರು ಹಾಸ್ಯವಾಗಿ ಪ್ರಸ್ತಾಪಿಸಿದುದನ್ನು ಈ ಕಿವಿಗಳು ಕೇಳಿವೆ. ಉಳಿದುವೆಲ್ಲ ಮಂಪರು, ಮಂಪರು!

ಹೀಗೆ ಅವರ ಹೆಸರಿನ ಪರಿಚಯವಾದ ನನಗೆ ಅವರ ಕೃತಿಯೊಂದನ್ನು ಓದುವ ಭಾಗ್ಯ ನಾನು ಏಳನೆಯ ತರಗತಿಯಲ್ಲಿದ್ದಾಗ ದೊರಕಿತು. ಅವರ 'ಹಳೆಯ ನೆನಹು' ಕವನವನ್ನು ನಮ್ಮ ಪಠ್ಯಪುಸ್ತಕದಲ್ಲಿ ಅಳವಡಿಸಿದ್ದರು. ಅಷ್ಟು ಹೊತ್ತಿಗೆ ಅವರು ಜಿಲ್ಲೆಯ ಪ್ರಮುಖ ಸಂಪಾದಕರು, ಕವಿಗಳು, ಲೇಖಕರು, ವಾಗ್ಮಿಗಳು ಎಂಬ ಹೆಸರು ಗಳಿಸಿದ್ದರು. 'ಹಳೆಯ ನೆನಹು' ಕವನ ನನ್ನ ಮೇಲೆ ತುಂಬ ಪರಿಣಾಮವನ್ನುಂಟು ಮಾಡಿದೆ. ಆದ್ದರಿಂದ ನನ್ನ ನೆನಪಿನಲ್ಲಿ ಇಂದಿನವರೆಗೂ ಉಳಿದಿದೆ. ಅದರಲ್ಲಿ ಅಲೆ—ಅಲೆಯಾಗಿ ನುಗ್ಗಿಬರುವ ದುಃಖ ನನ್ನೆದೆಯನ್ನು ಅಪ್ಪಳಿಸಿವೆ. ತದನುರೂಪದ ಭಾವಗಳನ್ನು ಕೆರಳಿಸಿವೆ. ಆ ಕವನದ ಛಂದಸ್ಸು, ಅದರಲ್ಲಿ ಅರಳಿದ ಭಾವ, ಅದಕ್ಕಾಗಿ ಬಳಸಿದ

ಶಬ್ದ ನನಗೆ ತುಂಬ ಹಿಡಿಸಿದೆ. ಅಂದು ಕಂಠಪಾಠ ಮಾಡಿದ ಹಾಡಿನ ಅನೇಕ ಭಾಗಗಳನ್ನು ಇಂದಿಗೂ ಹಾಡಬಲ್ಲೆ.

'ಹರಿಯುತಿಹುದು ಎನ್ನಮನವು ಹಿಂದೆ ಕಳೆದ ದಿನದ
ಹಾದಿ ಹಿಡಿದು
ಪರಿಮಳಕ್ಕೆ ಹಾರುತ್ತಿರುವ ತುಂಬಿಯಂತೆ ಸುಳಿದು
ಸುಳಿದು'

ಎನ್ನುವ ಸಾಲುಗಳು ಈಗಲೂ ನನ್ನ ಕಿವಿಯಲ್ಲಿ ಗುಂಯ್ ಗುಟ್ಟಿದಂತೆ ಆಗುತ್ತದೆ. ಅವರ ಮಾತಿನ ಮೋಡಿ ಯಾರ ಮನಸ್ಸನ್ನೂ ಸೆರೆ ಹಿಡಿಯ ಬಲ್ಲುದು.

ನನಗೆ ಸಾಹಿತ್ಯದಲ್ಲಿ ಹೇಳುವ ಅಭಿರುಚಿ ಹುಟ್ಟಿರಲಿಲ್ಲ. ನನ್ನ ವಯೋಪರಿಮಿತಿಗನುಗುಣವಾದ ಆಸಕ್ತಿ ಕೆರಳಿತ್ತು. ಅವರ ಕುರಿತ ಒಂದೆರಡು ಸಂಗತಿಗಳನ್ನು ನಾನು ಸಂಗ್ರಹಿಸಿದ್ದೆ. ಶಂಕರ ಭಟ್ಟರು ಉಜ್ವಲ ದೇಶಾಭಿಮಾನಿಗಳು; ಅದರಿಂದ ಪ್ರಚೋದಿತರಾಗಿ ಕಾಲೇಜಿಗೆ ಶರಣುಹೊಡೆದರು. ಗಾಂಧೀಜಿಯ ಕರೆಗೆ ಮನ್ನಣೆಕೊಟ್ಟು ಕಾಲೇಜಿಗೆ ಶರಣುಹೊಡೆದು ಹೊರಬಂದ ಹಿರಿಯರಲ್ಲಿ ಅವರೂ ಒಬ್ಬರು. ವಿದ್ಯಾರ್ಜನೆಯನ್ನು ಮುಂದುವರಿಸಿದ್ದರೆ ಶಂಕರ ಭಟ್ಟರ ಪಾಲಿಗೆ ಯಾವ ಉಜ್ವಲ ಭವಿಷ್ಯ ಕಾದಿತ್ತೋ? ಕಾಲೇಜಿಗೆ ಕೊನೆಯ ನಮಸ್ಕಾರ ಕೊಟ್ಟ ಶಂಕರ ಭಟ್ಟರು ಕೆಲ ಕಾಲ ಶಿಕ್ಷಕರಾಗಿ ಕಾಲಕಳೆದರು. ದಿವಂಗತ ಮುಳಿಯ ತಿಮ್ಮಪ್ಪಯ್ಯನವರು ಶ್ರೀ ಕಡೆಂಗೋಡ್ಲುರವರ ಆಪ್ತ ಬಂಧುಗಳು. ನುರಿತ ವಿದ್ವಾಂಸರಾದ ತಿಮ್ಮಪ್ಪಯ್ಯನವರ ಶಿಷ್ಯತನವನ್ನು ಶಂಕರ ಭಟ್ಟರು ಸ್ವೀಕರಿಸಿದರು. ಕನ್ನಡದ ಅಧ್ಯಯನವನ್ನು ನಡೆಸಿದರು. ಆಗ ವಿಶೇಷ ಪ್ರಚಾರದಲ್ಲಿದ್ದ ಮದರಾಸು ವಿಶ್ವವಿದ್ಯಾನಿಲಯ

ಏರ್ಪಡಿಸುತ್ತಿದ್ದ 'ವಿದ್ವಾನ್ ಪರೀಕ್ಷೆಗೆ ಕುಳಿತು ತೇರ್ಗಡೆಯಾ ದರು. ಅನಂತರ ದೊರಕಿತು ಸೈಂಟ್ ಆಗ್ನಿಸ್ ಕಾಲೇಜಿನಲ್ಲಿ ಕನ್ನಡ ಹೇಳಿಕೊಡುವ ಕೆಲಸ. ಅದನ್ನು ಸೌಭಾಗ್ಯವೆಂದು ಕರೆ ಯಲೇ? ಅಥವಾ ಅವರ ದೌರ್ಭಾಗ್ಯ ಎಂದು ಹೇಳಲೇ? ಕನ್ನಡ ಕಲಿಸುವುದನ್ನು ದೌರ್ಭಾಗ್ಯ ಎಂದುದಕ್ಕೆ ನಿಮ್ಮಲ್ಲಿ ಕೆಲ ವರಿಗೆ ಆಶ್ಚರ್ಯವೂ, ನನ್ನ ಬಗ್ಗೆ ಬೇಸರವೂ ಬಂದಿರಬೇಕು. ಶಂಕರ ಭಟ್ಟರಿಗೆ ಮೊದಲಲ್ಲಿ ಆದ ಕಟು ಅನುಭವವನ್ನು ಅವರ ಬಾಯಿಯಿಂದಲೇ ಕೇಳಿದ್ದೇನೆ. ಆ ಪ್ರಸಂಗ ಇನ್ನೂ ಹಚ್ಚಹಸಿ ರಾಗಿ ನನ್ನ ಮನೋಭಿತ್ತಿಯಲ್ಲಿ ಉಳಿದಿದೆ. ಅದನ್ನು ತಿಳಿದುಕೊಂ ಡ ಯಾರೂ ನನ್ನ ಮಾತಿಗೆ ಅಪಾರ್ಥ ಕಲ್ಪಿಸರು.

ಬಹಳ ವರ್ಷಗಳ ಕೆಳಗೆ ನನ್ನ ತೀರ್ಥರೂಪರ ಜೊತೆಯಲ್ಲಿ ಅವರಲ್ಲಿಗೆ ಹೋದೆ. ದಿವಂಗತ ಮುಳಿಯ ತಿಮ್ಮಪ್ಪಯ್ಯನವರೂ ಅವರೂ ಆಗ ಒಟ್ಟಿಗೆ ಇದ್ದರು. ಪರೀಕ್ಷೆಗೆ ಕುಳಿತ ವಿದ್ಯಾರ್ಥಿನಿ ಯರ ಉತ್ತರ ಪತ್ರಿಕೆಗಳನ್ನು ಅವರು ತಿದ್ದುತ್ತ ಕುಳಿತಿದ್ದರು. ಆ ಮಾತು ಈ ಮಾತು ಬಂದು ಅದು ಕೊನೆಯಲ್ಲಿ ಕಾಲೇಜಿನ ಲ್ಲಿ ಕಾಲೇಜಿನ ಪ್ರವಚನಗಳ ಕಡೆಗೆ ತಿರುಗಿತು. ಶಂಕರ ಭಟ್ಟರಂ ತಹ ನುರಿತ ವಿದ್ವಾಂಸರಿಗೆ, ಸರಸ ವಾಗ್ಮಿಗಳಿಗೆ, ವಿದ್ವತ್ತು, ಸಾಧನ ಸಂಪತ್ತು ಉಳ್ಳ ಹಿರಿಯರಿಗೆ ಕನ್ನಡ ಕಲಿಸುವ ಕೆಲಸ ಸುಲಭ ಅನಿಸಬೇಕೆಂಬುದು ಚರ್ಚೆಯ ಮುಖ್ಯ ವಿಷಯ. ಆ ಸುಖದ ವರ್ಣನೆಯನ್ನು ಅಂದು ಅವರು ಮಾಡಿದರು. ಆ ಕತೆ, ಕಥೆಯಲ್ಲ, ವ್ಯಥೆಯಾಗಿಯೇ ಇಂದಿಗೂ ಉಳಿದಿದೆ. ಕನ್ನಡದ ಶೋಚನೀಯ ಸ್ಥಿತಿಯನ್ನು ಕಂಡು ಎದೆಕರಗದಿರದು. ಸಪುರ ವಾದ ಎಂದರೆ ತೋರವಲ್ಲದ, ಉದ್ದವಾದ ಎಂದರೆ ಗಿಡ್ಡ ಅಲ್ಲದ ಎಂದು ಮುಂತಾಗಿ ಕನ್ನಡದ ಅನೇಕ ಕ್ಲಿಷ್ಟ ಪದಗಳಿಗೆ ಅರ್ಥ

ವಿವರಿಸಿ, ಗಂಟಲೊಣಗಿಸಿಕೊಳ್ಳುವ ಪರಿಸ್ಥಿತಿ ಪ್ರೌಢ ವಿದ್ಯಾರ್ಥಿನಿಯರಿಗೆ ಪಾಠ ಹೇಳಿ ಕೊಡುವ ಕಾಲದಲ್ಲಿ ಬಂದುದುಂಟೆಂದೂ ಹಲಕೆಲವು ಸಂದರ್ಭಗಳಲ್ಲಿ ಅವುಗಳಿಗೆ ಇಂಗ್ಲಿಷಿನಲ್ಲಿ ಅರ್ಥ ತಿಳಿಸಿ ತಲೆಗೆ ಮೆತ್ತಿದುದುಂಟೆಂದೂ ಅವರು ತಿಳಿಸಿದರು. ಇಂತಹ ಸಂದರ್ಭಗಳೇ ಹೆಚ್ಚಾಗಿದ್ದಲ್ಲಿ ಅದು ಶಿಕ್ಷಕರಿಗೆ ಶಿಕ್ಷೆಯಲ್ಲದೆ, ಬೇರೇನು? ಅಂದು ಆ ಮಾತು ಕೇಳಿ ನನ್ನಲ್ಲಿ ನಗುವಿನ ಅಲೆಗಳು ಎದ್ದುವು. ಆದರೆ ಇಂದಿಗೂ ಅದು ನುಂಗಲಾರದ ನೋವು ಆಗಿದೆ; ಹಾಗೆ ಉಳಿದಿದೆ.

ದೇಹ ತೆಳ್ಳಗೆ, ಬೆಳ್ಳಗೆ, ಐದೂವರೆ ಅಡಿ ಎತ್ತರದ ಆಳು, ಬೊಕ್ಕ ತಲೆ. ತುಂಬ ಹಸನ್ಮುಖಿ. ಅಮಿತವಾದ ಉತ್ಸಾಹ— ಉತ್ಸಾಹ ಉಡುಗಿ ಹೋಗುವ ವಯಸ್ಸು ಆಗಿದ್ದರೂ— ಉಕ್ಕಿ ಹರಿಯುವುದನ್ನು ಮಾತು, ಕೃತಿ, ಹಾವ—ಭಾವಗಳಲ್ಲಿ ಗುರುತಿಸಬಹುದು. ಇಷ್ಟೆಲ್ಲ ಇದ್ದರೂ ಹೊರಗಿನಿಂದ ಹೊರಗೆ ನೋಡುವವರಿಗೆ ಶ್ರೀ ಕಡೇಗೋಡ್ಲು ಆಕರ್ಷಕ ವ್ಯಕ್ತಿಯೆಂದು ಹೇಳುವ ಎಂಟೆದೆ ನನ್ನದಲ್ಲ. ಅವರದು ಮೇಲೆ ಬಿದ್ದು ಮಾತನಾಡಿಸುವ ಪ್ರವೃತ್ತಿಯಲ್ಲ. ಬಹಳವಾಗಿ ಅವರು ಅಂತರ್ಮುಖಿ. ತಮ್ಮ ಕೆಲಸ–ಹವ್ಯಾಸಗಳನ್ನು, ಅಧ್ಯಯನ–ಅಭ್ಯಾಸಗಳನ್ನು, ಒಪ್ಪವಾಗಿ, ಓರಣವಾಗಿ ನಡೆಸಿಕೊಂಡು ಬರುವ ಸ್ವಭಾವ ಸರಲ ಜೀವಿ. ಪ್ರಸಿದ್ಧಿ–ಪ್ರಲೋಭನೆಗಳಿಗೆ ಒಳಗಾಗದ ಚೇತನ. ಹೊಗಳುವುದನ್ನು ಕಂಡರೆ ಮುಗಿದು ಬೀಳುತ್ತಾರೆ. 'ಬೆದರುವೆನು ಹುಸಿ ನಗೆಗೆ, ನಾಚುವೆನು ಘೋಷಣೆಗೆ' ಎಂಬ ಸಾಲು ಅವರ ಈ ಮನೋಧರ್ಮವನ್ನು ಪ್ರಸ್ಫುರಿಸುತ್ತದೆ ಏನೋ? ಅನ್ಯರ ಅಭಿಪ್ರಾಯಕ್ಕೆ ತಲೆ ತೂಗಿಸಬಲ್ಲರಾದರೂ ಎಂದೂ ತಮ್ಮ ಸ್ವಂತ ನಿಲುವಿಗೆ ಎಳ್ಳು ನೀರು ಕೊಟ್ಟವರಲ್ಲ. ಅವರು ಬಿಚ್ಚು ಮನಸ್ಸಿ

ನವರು. ಪ್ರಸಂಗ ಬಂದಾಗ ಅವರ ಮಾತೂ ಮನಸ್ಸೂ ಕಠಿಣ. ಸಮಯ ಬಂದಾಗ ಅಷ್ಟೇ ಮೃದು, ಮಧುರ. ಅವರ ಅಂತರಂಗ ಬಹಿರಂಗಗಳು ಬೇರೆಬೇರೆಯಲ್ಲ. ಅಂತಹ ಬದುಕು ಅವರಿಗೆ ಸೇರದು. ಅಂತಹ ಬದುಕನ್ನು ನಡೆಸುವ ಜನರನ್ನು ಉದ್ದೇಶಿಸಿ ಬರೆದರೋ ಎನ್ನುವಂತಿದೆ 'ಮಾದ್ರಿಯ ಚಿತೆ'ಯಲ್ಲಿನ

'ಆರಾದರೇನವರ ಒರೆ ಬೇರೆ, ಒಳ ಬಾಳು ಬೇರೆ.
ಜೋಡಾಗಿ ಸೇರಿದರೆ ಒಂದಾಗಿ ತೋರುವುದು
ಆದರಂತೆ ಬಾಳುವೆಯ ಮೋರೆ'

ಎಂಬ ಆಲಂಕಾರಿಕವಾದ ಮಾತುಗಳು ಶಂಕರ ಭಟ್ಟರ ಮಾತು, ಮುಖ ಅವರ ಮನಸ್ಸಿನ ಆಳಕ್ಕೆ ಕನ್ನಡಿ ಹಿಡಿಯಬಲ್ಲುವು. ಹಿಡಿದುದನ್ನು ಸಾಧಿಸುವ ಕುರುಡು ಹಟವೂ ಅವರಲ್ಲಿ ದೊಡ್ಡ ಪ್ರಮಾಣದಲ್ಲಿ ಅವಿತುಕೊಂಡಿದೆ.

ಅವರ ಜೀವನ ವ್ಯವಸ್ಥಿತ, ಕ್ರಮಬದ್ಧ ಎಂದು ಹೇಳಿದೆ. ಅದಕ್ಕೊಂದು ನಿದರ್ಶನ ಕೊಡಬಲ್ಲೆ. ೧೯೩೦ರಿಂದ ಹಿಡಿದು ೧೯೩೭ರ ವರೆಗೂ ನಾನು ಸಂಜೆಯ ಹೊತ್ತು ಮಂಗಳೂರು ರೈಲು ನಿಲ್ದಾಣದ ಮೇಲಾಗಿ ನಮ್ಮ ಜಪ್ಪಿನ ಮನೆಗೆ ಹೋಗುತ್ತಿದ್ದೆ. ಆಗ ಅದು ಮದರಾಸಿನಿಂದ ರೈಲುಗಾಡಿ ಮಂಗಳೂರಿಗೆ ಬರುವ ವೇಳೆ. ಕಾಲೇಜನ್ನು ಬಿಟ್ಟ ಶಂಕರ ಭಟ್ಟರು ನೇರವಾಗಿ ಒಂದು ಪತ್ರಿಕೆಯನ್ನು ಒಯ್ಯುವ ಆತುರದಿಂದ ಸ್ಟೇಶನಿಗೆ ಧಾವಿಸಿ ಬರುತ್ತಿದ್ದುದನ್ನೂ, ಕೇಂದ್ರ ಮೈದಾನದ ಗೋಪುರದ ಕೆಳಗೆ ನಿಂತು ವರ್ತಮಾನ ಓದುತಿದ್ದುದನ್ನೂ ನೂರಾರು ಬಾರಿ ಕದ್ದು ನೋಡಿದ್ದೇನೆ. ಒಮ್ಮೊಮ್ಮೆ ಹುರುಳಿ ಭೀಮರಾಯರೂ ಅವರನ್ನು ಕೂಡಿಕೊಳ್ಳುತ್ತಿದ್ದರು. ಬರುವ

ಸಮಯದಲ್ಲಿ ಹೆಚ್ಚು-ಕಡಿಮೆಯಾದುದನ್ನು, ಹಿಡಿಯುವ ರಸ್ತೆಯು ಬದಿ ಬದಲಾಯಿಸಿದ್ದನ್ನು ನಡೆದು ಬರುವ ರೀತಿಯಲ್ಲಿ ಕೊಂಕು-ಕೋರೆಯಾದುದನ್ನು ಈ ದೀರ್ಘ ಅವಧಿಯಲ್ಲಿ ನಾನು ಎಂದೂ ಕಂಡವನಲ್ಲ. ಅಲ್ಲಿಂದ ಕಾಲ್ತೆಗೆದರೆ ನೇರ ಮನೆಗೆ. ಅನಂತರ ಓದಿದ ವರ್ತಮಾನವನ್ನು ಮೆಲುಕು ಹಾಕುವುದು. ವಿಪರೀತ ಅರ್ಥ ಕಲ್ಪಿಸಿ ರಾಷ್ಟ್ರಬಂಧುವಿನ ಸ್ಥಿರ ಶೀರ್ಷಿಕೆ 'ಅಲ್ಲಲ್ಲಿ ಇಷ್ಟಿಷ್ಟು' ಭಾಗಕ್ಕೆ ವಿಷಯ ಗುರುತಿಸಿಕೊಳ್ಳುವುದು. ಕುತರ್ಕ ವಾಚಸ್ಪತಿ ಎಂಬ ಗುಪ್ತನಾಮ ಇಟ್ಟುಕೊಂಡು ೩೦ ವರ್ಷ ಗಳಿಂದಲೂ ಈ ಸ್ಥಿರ ಶೀರ್ಷಿಕೆಗೆ ಅವರು ಬರೆಯುತ್ತ ಬಂದ ವರೇ! ಅಭಿಪ್ರಾಯ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವ ಸ್ಥಿತಿ ಬಂದಾಗ, ಆ ಧ್ಯೇಯವನ್ನು ಕಾಪಾಡಿಕೊಳ್ಳುವ ಉತ್ಕಟೇಚ್ಛೆ ಯಿಂದ, ತಾವೇ ಶ್ರಮವಹಿಸಿ, ಕಟ್ಟಿದ ರಾಷ್ಟ್ರಬಂಧುವಿನ ಹಂಗನ್ನು ಹರಿದುಕೊಂಡು ಬಂದರೂ—ಅವರಿಗೆ ಒಂದಿಷ್ಟು ವ್ಯಸನವಾಗಲಿಲ್ಲ. ತಮ್ಮ ನಿಲುವನ್ನು ನಿರೂಪಿಸಲು ಹೊಸ ಸಂಸ್ಥೆಯನ್ನು ಕಟ್ಟಿದರು. ತಮ್ಮ ಪತ್ರಿಕೋದ್ಯಮವನ್ನು ಮುಂದುವರಿಸಿದರು. ಅವರ 'ರಾಷ್ಟ್ರಮತ' ಹೀಗೆ ಗರಿಗೆದರಿ ನಿಂತಿತು. ಅವರ ಅಗ್ರಲೇಖನಗಳಲ್ಲಿ, ಕುತರ್ಕಗಳಲ್ಲಿ ಹುದು ಗಿರುವ ಅರ್ಥ, ಧ್ವನಿ, ವಕ್ರ-ವ್ಯಂಗತೆಗಳನ್ನು ಓದಿ ಗ್ರಹಿಸಿ ಕೊಳ್ಳಬೇಕು.

ಅವರು ಬಿಚ್ಚು ಮನಸ್ಸಿನವರು, ಪ್ರಸಂಗ ಬಂದಾಗ ಮಾತೂ-ಮನಸ್ಸೂ ಕಠಿಣ ಎಂದೆ. ಆ ಕುರಿತು ನನ್ನ ಅನುಭವ ವನ್ನೇ ನಿಮ್ಮ ಮುಂದೆ ಇಡುತಿದ್ದೇನೆ— ಈಗ್ಗೆ ೨೦ ವರ್ಷಗಳ ಕೆಳಗೆ ನನ್ನಿಂದ ಒಂದು ಸಣ್ಣ ಪ್ರಮಾದವಾಯಿತು. ನನ್ನ ಒಂದು ಪುಟ್ಟ ನಾಟಕ ಸ್ವದೇಶಾಭಿಮಾನಿಯಲ್ಲಿ ಪ್ರಕಟವಾಯಿತು. ಆ

ನಾಟಕ ನನ್ನ ಹತ್ತಿರದ ಬಂಧುಗಳಲ್ಲಿ ಗೊಂದಲವನ್ನು ಎಬ್ಬಿಸಿತು. ಹಿರಿಯರ ಮುಖ ನೋಡಿಯೋ, ನನ್ನ ಎಳೆಯ ವಯಸ್ಸನ್ನು ಕಂಡೋ ಎಲ್ಲರೂ ಮೌನ ತಾಳಿದರು. ಪ್ರಸಂಗ ಮುಂದುವರಿಯಲಿಲ್ಲ. ಕೋರ್ಟು ಹತ್ತುವ ಪ್ರಸಂಗ ಬರಲಿಲ್ಲ. ಆ ನಾಟಕದ ಕಾವು ಆರದಿದ್ದ ಒಂದು ಸಂಜೆ ಬಾವುಟಿ ಗುಡ್ಡವನ್ನಿಳಿದು ಹೆಣ್ಣುಮಕ್ಕಳ ಟ್ರೈನಿಂಗ್ ಕಾಲೇಜದ ಸಮೀಪಕ್ಕೆ ಬಂದಿದ್ದೆ. 'ಹಿಂದು'ವಿನೊಡನೆ ಶಂಕರ ಭಟ್ಟರು ಹಿಂದಿರುಗುತಿದ್ದರು.ನಾನು ಅವರನ್ನು ಸಂಧಿಸಿದೆ. ಯಾವ ದ್ರಾವಿಡ ಪ್ರಾಣಾಯಾಮವನ್ನೂ ಬಳಸಲಿಲ್ಲ. ನೇರವಾಗಿ ನಾಟಕದ ವಿಷಯಕ್ಕೆ ಬಂದರು. ಅವರ ಕುರಿತು ನಾನು ಏನು ಗ್ರಹಿಸಿಕೊಳ್ಳುವೆ ಎನ್ನುವ ಗೋಜಿಗೂ ಹೋಗದೆ ಮಾತಿನ ಮಳೆಗರೆದರು. ಕಲೆ—ಸಾಹಿತ್ಯದ ಒಂದು ಪೃಥಕ್ಕರಣೆಯೇ ಆಯಿತು. ರೇಗಿದರೆ ಅವರ ಹೆಸರು ಅವರಿಗೆ ಅನ್ವರ್ಥ ಎಂಬುದರ ಅರಿವು ನನಗೆ ಆದುದು ಅಂದೇ! ನಾನು ಅವರ ಬಳಿ ಮೌನವಾಗಿ ಹೆಜ್ಜೆ ಹಾಕುತಿದ್ದೆ. ಅವರ ವಾಗ್ಝರಿ ನಿರರ್ಗಳವಾಗಿ ಹರಿಯುತ್ತಲೇ ಇತ್ತು. ಪ್ರಯೋಜನವಿಲ್ಲವೆಂದು ಅವರೇ ಕೊನೆಗೊಮ್ಮೆ ಅದಕ್ಕೆ ಕಡಿವಾಣ ಹಾಕಿದರು. ಆತ್ಮೀಯತೆಯಿಂದ ಅಂತಃಕರಣ ಕಲುಕುವಂತೆ 'ನಿನಗೆ ಬೇಸರವಾಯಿತೇ? ಬೇಸರ ಬಂದರೂ ಚಿಂತೆಯಿಲ್ಲ. ನೀನು ಬರೆಯಬಲ್ಲೆ; ಆದರೆ ಬರೆದುದು ಬರವಣಿಗೆಯಲ್ಲ. ಒಳ್ಳೆಯದನ್ನು ನೀನು ಬರೆಯುವಂತೆ ಮಾಡಬೇಕೆಂಬುದು ನನ್ನ ಉದ್ದಿಶ್ಯ' ಎಂದು ಇನ್ನು ಏನೇನೋ ಹೇಳಿದರು. ಅವರ ಮಾತಿನಿಂದ ನಾನು ಜಾಗ್ರತನಾದೆ. ಅವರ ಅಂದಿನ ಮಾತುಗಳಲ್ಲಿ ನಾನು ಯಾವ ನಯ ನಾಜೂಕನ್ನೂ ಕಾಣಲಿಲ್ಲ ಅತಿ ಮೊನಚು, ತೀಕ್ಷ್ಣತೆ ಮಾತ್ರ ಕಂಡುಬಂದುವು. ಅವರಲ್ಲಿ ನನಗಿದ್ದ ಪೂಜ್ಯಭಾವ ಅಂದಿನಿಂದ ಇಮ್ಮಡಿ

ಯಾಯಿತು. ಆದರೆ ಬರೆಯುವ ದುರಭ್ಯಾಸವನ್ನು ಬಿಡಲೇ ಇಲ್ಲ. ಆದರೆ ಬರೆಯುವ ಕಾಲದಲ್ಲಿ ಆ ದಿನದ ನೆನಪು ಬಂದು ಶ್ರೀ ಶಂಭು ಶರ್ಮರ

'ಅಚ್ಚು ಸಾಲೆಗಳುಂಟು, ವೆಚ್ಚಕ್ಕೆ ಹಣವುಂಟು
ಮೆಚ್ಚುವುದು ತನ್ನ ಮನವೆಂದು, ಅಚ್ಚು ಹಾಕುವುದೆ
ಮುಚ್ಚಿಡುವುದೊಳ್ಳಿತಭ್ಯಾಸ ಕವಿತೆಗಳನ್ನು'

ಎಂಬ ಸಾಲುಗಳನ್ನು ಉಚ್ಚರಿಸುವಂತೆ ಮಾಡುತ್ತವೆ.

ಅವರೇನೋ ಮಂಗಳೂರಿನಲ್ಲಿ ನೆಲೆಸಿದ್ದಾರೆ. ಕಳೆದ ಮೂರು ದಶಕಗಳಿಂದ ಅದು ಅವರ ಎಲ್ಲ ಚಟುವಟಿಕೆಗಳ ಕೇಂದ್ರವಾಗಿದೆ. ಆದರೂ ಕೇರಳಕ್ಕೆ ಸೇರಿದ ಕಾಸರಗೋಡಿನ ಬಗ್ಗೆ ಅವರಿಗಿರುವ ಅಭಿಮಾನ ಕಡಿಮೆಯಾಗಲಿಲ್ಲ. ಅಲ್ಲಿಯ ಜನರಿಗಾಗಿ ಅವರು ಈಗಲೂ ಪರಿತಪಿಸುತ್ತಿದ್ದಾರೆ—ಆ ಭಾಗದ ಜನಕ್ಕೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ದ್ರೋಹವೆಸಗಿದ ಎಲ್ಲರ ಕುರಿತು ಅವರು ಆಕ್ರೋಶ ತಳೆದಿದ್ದಾರೆ— ಆ ವಿಚಾರ ಪ್ರಸ್ತಾಪಿಸಿದಾಗಲೆಲ್ಲ ಅವರು ಆವೇಶದಿಂದ ಮಾತನಾಡುತ್ತಾರೆ. ಆದರೆ ಅದು ತಾನು ಹುಟ್ಟಿ ಬೆಳೆದ ಭೂಭಾಗ ಎಂದಲ್ಲ; ಅಲ್ಲಿ ಭೂಮಿ ಕಾಣಿ ಇದೆ ಎಂದಲ್ಲ; ಹತ್ತಿ—ಹೊಂದಿದವರು ಬೇರುಬಿಟ್ಟ ಸ್ಥಳ ಎಂದಲ್ಲ—ಆದು ಪ್ರಮುಖವಾಗಿ ಕನ್ನಡದ ಭೂಭಾಗ ಎನ್ನುವುದರಿಂದ. ಈ ನಂಬಿಕೆಗೆ ಅವರು ಇಂದೂ ಗಟ್ಟಿಯಾಗಿ ಅಂಟಿಕೊಂಡವರು.

ಕನ್ನಡಕ್ಕಾಗಿ, ಕನ್ನಡದ ಏಳ್ಗೆಗಾಗಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದುಡಿದ, ದುಡಿದು ದಣಿದ ಹಿರಿಯರಲ್ಲಿ ಅವರೂ ಒಬ್ಬರು. ಅವರ ಹೆಸರು ಕೈಯೆಣಿಕೆಗೆ ಬರುವಂಥ ಹೆಸರು. ಮುಕ್ಕಣ್ಣ, ತ್ರಿಶೂಲಿ, ಭುಕುಂಡ ಮೊದಲಾದ ಗುಪ್ತನಾಮಗಳನ್ನು ಇಟ್ಟು

ಕೊಂಡು ಕತೆ, ಪ್ರಬಂಧಗಳನ್ನು ಬರೆದರು. ತಮ್ಮ ಕುತರ್ಕಗಳಿಂದ ಹಲವರನ್ನು ನಗಿಸಿದರು. ತಮ್ಮ ಮೊನಚಾದ, ತೀಕ್ಷ್ಣವಾದ ವಿಮರ್ಶೆಗೆ ಅನೇಕರನ್ನು ಗುರಿಗೊಳಿಸಿದರು. ಹಣ್ಣು-ಕಾಯಿ, ಕಾಣಿಕೆ, ನಲ್ಮೆ ಮೊದಲಾದ ಕಾವ್ಯಗಳನ್ನು ಬರೆದರು. ಅವರ ಒಂದು ದಶಕದ ಸೇವೆಯಿಂದ ನಮ್ಮ ಸಾರಸ್ವತ ಸಂಪತ್ತು ತುಂಬಿ ಬಂತು. ಅವರ ಪಾಂಡಿತ್ಯ, ಪ್ರತಿಭೆ ಪ್ರಯೋಗಗಳನ್ನು ಕನ್ನಡದ ಜನ ಗುರುತಿಸಿದರು, ಗ್ರಹಿಸಿದರು. ಮಡಿಕೇರಿಯಲ್ಲಿ ಸಾಹಿತ್ಯ ಸಮ್ಮೇಳನದ ಅಂಗವಾಗಿ ನಡೆದ ಕವಿ ಗೋಷ್ಠಿಗೆ ಅವರನ್ನು ಅಧ್ಯಕ್ಷರನ್ನಾಗಿ ಆರಿಸಿ ಗೌರವಿಸಿದರು.

ಅವರ ಕತೆ, ಕಾದಂಬರಿ, ಕಾವ್ಯ ಹಾಗೂ ಇತರ ಬರಹಗಳ ಪರಿಚಯ ಮಾಡಿಸಿ, ಸಾಹಿತ್ಯ ಭಕ್ತರ ದೃಷ್ಟಿಯನ್ನು ಅವರ ಕಡೆ ಹೊರಳಿಸುವುದು ನನ್ನ ಇಂದಿನ ಭಾಷಣದ ಮುಖ್ಯ ಗುರಿ. ಇದೊಂದು ವಿಹಂಗಮ ನೋಟ. ವಿಸ್ತೃತವಾದ ವಿಮರ್ಶೆಯಲ್ಲ; ವಿವರವಾದ ಜೀವನ ಚರಿತ್ರೆಯಲ್ಲ.

೨

ಕಾವ್ಯಕ್ಕೆ ಬಾಹ್ಯ-ಅಂತರಂಗ ಎಂಬೆರಡು ಅಂಗಗಳು. ಕುಂದು ಕಸರಿಕೆ ಇಲ್ಲದ ಪದಕೂಟ ಅದರ ಬಾಹ್ಯಾಂಗವಾದರೆ ಕುಂದು ಕೊರತೆಗಾಣದ ಹುರುಳಿನ ತಿರುಳು ಅದರ ಅಂತರಂಗ. ಅವೆರಡೂ ಅನುಗೊಂಡು ಮೂಡಿದರೆ ಅದು ಪೂರ್ಣಾಂಗ; ಉತ್ಕೃಷ್ಟವಾದ ಕಾವ್ಯ! ಶೈಲಿ-ರಸಗಳೆರಡೂ ಆ ಕಾವ್ಯದಲ್ಲಿ ಅನ್ಯೋನ್ಯವಾಗಿ ಬೆರೆತು ಸಮರಸವಾಗಿರಬೇಕು. ಈ ಕ್ಷಿಳತೆ

ಗೋಲನ್ನು ಮುಂದಿಟ್ಟುಕೊಂಡು ಅವರ ಕಾವ್ಯಗಳನ್ನು ಪರೀಕ್ಷಿಸಿದಲ್ಲಿ ಶ್ರೀ ಶಂಕರ ಭಟ್ಟರನ್ನು ಶ್ರೇಷ್ಠ ಕವಿಗಳೆಂದು ಹೇಳಬಹುದು.

ಶ್ರೀ ಶಂಕರ ಭಟ್ಟರು ಪ್ರಾಸಾದಿಕ ಕವಿಗಳು. ಪಾಂಡಿತ್ಯ, ಅನುಭವ, ಸಂಸ್ಕಾರಗೊಂಡ ಹೃದಯ, ಅವರ ಕೃತಿಗಳ ಯೋಗ್ಯತೆಯನ್ನು, ತೂಕವನ್ನು ಇನ್ನಷ್ಟು ಹೆಚ್ಚಿಸಿವೆ. ಹಳತನ್ನೆಲ್ಲ ಅಗಿದು, ಜಗಿದು, ಜೀರ್ಣಿಸಿಕೊಂಡ ಅವರಿಗೆ ಹೊಸತಿನಲ್ಲಿ ಹೆಚ್ಚಿನ ಆಸಕ್ತಿ! ಹಳೆಯ ಜಾಡು ಹಿಡಿದು ಮುನ್ನಡೆದವರಾದರೂ ಅವರು ಸಂಪ್ರದಾಯಶರಣರಲ್ಲ. ಅವರ 'ಹಣ್ಣು-ಕಾಯಿ' ಯಲ್ಲಿನ 'ಕಾವ್ಯಸಮಾಧಿ' ಕವನ ಆ ಭಾವವನ್ನು ಹೊರಹೊಮ್ಮಿಸಿದೆ. ಆ ಕಾವ್ಯಭಾಗ ಹೀಗಿದೆ—

ಕವಿಯೇ ಕಾವ್ಯ ಸಮಾಧಿಯೊಳೊರಗ್ಗೆ
ಅಮೃತಾನಂದದ ಪೀಠದೆ ಮಲಗ್ಗೆ
ಶತಶತಮಾನದ ಬೇರ್ಗಳ ಬಿಟ್ಟು
ನೂತನ ಯುಗಗಳ ರೆಂಬೆಗಳಿಟ್ಟು
ಜೀವನ ರಸಗಳ ಕಾಂಡಕೆ ಹೀರಿ
ದಿನದಿನಗಳ ಹೂಬಲಿಗಳ ಬೀರಿ
ಆದ್ಯಂತವ ಕಾಣದ ಹೆಮ್ಮರವಿದು
ತಲೆಮೇಗಡೆ ಹಸುರಿನ ಕೊಡೆ ಹಿಡಿವುದು
ವೇದದಿ ಬೋಧದಿ ಹುತ್ತವ ಕಟ್ಟಿ
ವಾದವು ಸರ್ಪದವೊಲು ಬುಸುಗುಟ್ಟಿ
ಬೆದರಿಸುತಿರುವುದು, ಮಾನವ ಕೋಟಿ
ಚದರುತಲಿರುವುದು ಚಿಲಿಪಿಲಿ ಗುಟ್ಟಿ

ನಿನ್ನಯ ಕಾವ್ಯ ಶರೀರದ ಸುತ್ತಲು
ಯುಗಧರ್ಮಗಳೇ ಹೆಣೆದಿವೆ ಎತ್ತಲು—

ಪ್ರಪಂಚ ಸಾಹಿತ್ಯ ವೃಕ್ಷವನ್ನೂ ಅದರ ಬೇರುಗಳನ್ನೂ ಅದರ ರೆಂಬೆಗಳನ್ನೂ ಅದು ಬೆಳೆಯುವ ವಿಧಾನವನ್ನೂ ಅದು ನೀಡುವ ತತ್ವಕವಿತಾಕುಸುಮವನ್ನೂ ಆಲಂಕಾರಿಕವಾಗಿ ಅವರು ಇಲ್ಲಿ ವರ್ಣಿಸಿದ್ದಾರೆ—ಒಂದಿಷ್ಟು ಶ್ಲೇಷ ಬೆರಸಿ, ಹಳತನ್ನು ಬಿಟ್ಟುಕೊಟ್ಟು ಹೊಸ ಪದ್ಧತಿಯನ್ನು ಅದು ಬಳಸಿ ಹೊಸ ಸ್ವರೂಪವನ್ನು ಅದು ತಾಳಬೇಕೆಂಬುದನ್ನು ಇಲ್ಲಿ ಅವರು ಅರ್ಥವತ್ತಾಗಿ ಚಿತ್ರಿಸಿದ್ದಾರೆ—

'ಹೊಸ ಕಲ್ಪನೆಯು ಎಮ್ಮಯ ಜೀವನಕ್ಕಾಡು ಹೊಲ' ಎಂಬ 'ಮಾದ್ರಿಯ ಚಿತೆಯು' ಸಾಲುಗಳು ಈ ಭಾವವನ್ನೇ ಸ್ಫುರಿಸುತ್ತವೆ.

ಈ ಹೊತ್ತಗೆಯಲ್ಲಿನ ಇನ್ನೊಂದು ಉತ್ತಮ ಕವನ 'ಪಂಡಿತನ ಪಯಣ.' ಅದೊಂದು ವಕ್ರಗೀತೆ. ಅದಕ್ಕೆ ಸ್ಫೂರ್ತಿಯ ಸೆಲೆಯಾಗಿ ನಿಂತವರು ಈ ಕ್ಷೇತ್ರದಲ್ಲಿ ವ್ಯವಸಾಯ ಮಾಡಿದ ಡ್ರೈಡೆನ್ ಮೊದಲಾದ ಆಂಗ್ಲ ಕವಿಗಳು. ಈ ಕವನ ಕಟ್ಟಿ ಅವರು ಹಲವರ ವಿರೋಧವನ್ನು ಸಂಪಾದಿಸಿಕೊಂಡರು. ಸತ್ಯ ಕಹಿಯೂ ಹೌದು; ಕಟುವೂ ಹೌದು. ಪಂಡಿತನ ಪಯಣದಲ್ಲಿ ಪ್ರಪಾದಿತವಾದ ನಿಷ್ಠುರ ಸತ್ಯ ಎಲ್ಲರೆದೆಯನ್ನು ಭಲ್ಲೆಯಂತೆ ಬಂದು ತಿವಿಯುತ್ತದೆ. ಆ ಎದೆಯ ನೋವನ್ನು ಭರಿಸುವ ಶಕ್ತಿಯಿಲ್ಲದೆ ಹಲವರು ಮುಖ ಸಿಂಡರಿಸಿಕೊಂಡಿರಬಹುದು, ಕೆಲವರು ಮೂಗು ಮುರಿದಿರಬಹುದು.

'ಸಂಧಿಸಮಾಸದ ಹೊರೆಗಳ ಹೊತ್ತು,
ಬಂದುದೆ ನಿನಗೀ ವಿಧದ ವಿಪತ್ತು'

ಎಂಬ ಸಾಲುಗಳನ್ನು ನೋಡಿದಲ್ಲಿ ಯಾರಿಗೆ ಕೋಪ ಬರಲಾರದು? 'ಅಪರಿಚಿತ ವಸ್ತುವಿನಲ್ಲಿ ಮೊದಲು ದ್ವೇಷ, ಮತ್ತೆ ಅವಜ್ಞೆ ಅನಂತರ ಅನಿವಾರ್ಯವೆಂಬ ಸಹನೆ, ಮತ್ತೆ ಆದರ; ಈ ಭಾವ ಪರಂಪರೆ ಸ್ವಾಭಾವಿಕವಾದುದು' ಎಂದು ಅವರೇ ಸಮಾಧಾನ ತಂದು ಕೊಂಡಿದ್ದಾರೆ—

'ಹಣ್ಣು-ಕಾಯಿ'ಗಳಲ್ಲಿ ವೈವಿಧ್ಯತೆಗೆ,ಛಂದೋಬದ್ಧ ವಿಧಾನತೆಗೆ ಬರ ಇಲ್ಲ. 'ಅದೊಂದು ತೆರ! ಇದೊಂದು ತರ!' ಕವನದ ಈ ಸಾಲುಗಳನ್ನು ಅವಲೋಕಿಸಿರಿ.

ಅದೊಂದು ತೆರ!
ಇದೊಂದು ತರ!
ಆಕೆಯು ನಗೆ
ಈಕೆಯು ಬಗೆ
ಅವಳ ನೋಡಿ
ಇವಳ ಗಾಡಿ

ಕದಡಿದ ನಗೆ
ಮುದುಡಿದ ಬಗೆ
ನಿಡುಸುಯ್ಲಲಿ
ಹಿಡಿದಿದೆ ಹೊಗೆ
ಚೆಲುವಿನ ಬಗೆ
ಒಲವಿನ ಹಗೆ

ಅದೊಂದು ತೆರ!
ಇದೊಂದು ತರ!

ಕೊಂಕುಗುರುಳ
ಸಂಕುಗೊರಳ
ಹುರುಡು ಗಾರ್ತಿ!
ಇವಳ ಕೀರ್ತಿ
ಮಾಯೆಯಂತೆ
ಮುಸಕು, ಮುಸಕು

ಒಂದು ನಡೆಗೆ
ಹಲವು ಹಾವ
ಒಂದು ನುಡಿಗೆ
ಹಲವು ಭಾವ
ಆಶೆಗಳನು
ಭಾಷೆಗಳನು

ದೈವದಂತೆ ತುಳಿದು ತೊಡೆದು
ಕೊಂಕು! ಕೊಂಕು! ನಲಿವಳವಳು

ಅಥವಾ 'ಗರತಿ'ಯಲ್ಲಿ ಕಂಡುಬರುವ ಸಾಲುಗಳನ್ನು ಮನನ ಮಾಡಿರಿ:

ಎನ್ನಯ ಬಾ ನೋವಿದ್ದರು
ಳಿನ ಕೆಳದೀ! ಸಾವಿದ್ದರು
ಕುಳಿತಿರು ಆ ಚಿಂತೆಗಳಾ
ತ್ಮದ ಕೆಳದೀ; ಮೋವಿದ್ದರು
ಸಂಸಾರದ ಈ ಕಳದಿ ಹಂಬಲಿನಂ
ಇಬ್ಬರೆ ಸುತ್ತುವೆವೂ; ಬಲಿಯಿದ್ದರು
ಇಬ್ಬರೆ ಸುಳಿಯುವೆವೂ ಒಟ್ಟಿಗೆ ಸವಿಯುವೆವು!
ಒಟ್ಟಿಗೆ ಸವೆಯುವೆವು!

ಹಿಂದಲ್ಲ!
ಮುಂದಿಲ್ಲ!
ಎಂದೆಂದಿಗು
ಬದುಕಿಲ್ಲ
ನಿಂದಲ್ಲೇ
ನೊಂದಲ್ಲೇ
ನಾವಗಲುವುದುಂಟು;
ನೋವಗಲುವುದುಂಟು.

ಅವರು ಶಾರದೆಯ ಗುಡಿಯ ಮುಂದೆ ಭಕ್ತಿಯಿಂದ 'ಹಣ್ಣು-ಕಾಯಿ'ಯನ್ನು ಎತ್ತಿಹಿಡಿದು ಅವಳ ಅನುಗ್ರಹಕ್ಕಾಗಿ ಕೈಜೋಡಿಸಿ ನಿಂತರು. ಅವರಿಗೆ ಸರಸ್ವತಿಯ ಪೂರ್ಣಾನುಗ್ರ

ಹವೇ ಪ್ರಾಪ್ತವಾಯಿತು. ಅವರ 'ಹಣ್ಣು—ಕಾಯಿ' ಒಂದು ಒಳ್ಳೆಯ ಕವನ ಸಂಕಲನ. ಆದರೆ ಅದನ್ನು ಓದಿ ರಸಾಸ್ವಾದನ ಮಾಡಿ, ಆನಂದಿಸಿದವರು ಎಷ್ಟು ಮಂದಿ? ಅದನ್ನು ಕಂಡು ಖೇದಗೊಂಡ ಶ್ರೀ ಕಡವದ ಶಂಭು ಶರ್ಮರು

'ಇಲ್ಲಿ ಭಕ್ತನೆತ್ತಿದ ಹಣ್ಣು–ಕಾಯಿ ಮಣ್ಣಾಗುತಿದೆ,
ಇಲ್ಲಿ ಸೊಬಗಿನ ಬಳ್ಳಿ ಎಳವೆಯಲಿ ಮುರುಟುತಿದೆ'

ಎಂದು ತಮ್ಮ ಕೊಳ್ಗುದಿಯನ್ನು ಹಾಡಿನ ರೂಪದಲ್ಲಿ ತೋಡಿಕೊಂಡರು. ಆದರೆ ಅವರ ಈ ಉದ್ಗಾರದಲ್ಲಿ ಉತ್ಪ್ರೇಕ್ಷೆಯಿಲ್ಲ.

ಅವರ 'ಕಾಣಿಕೆ'ಯಲ್ಲಿನ 'ಹಳೆಯ ನೆನಹಿನ' ಕುರಿತು ಆಗಲೇ ಒಂದೆರಡು ಮಾತುಗಳನ್ನು ಹೇಳಿದೆ ಅದರಿಂದ ಹೆಕ್ಕಬಹುದಾದ ಇನ್ನೊಂದು ಚೊಕ್ಕ ಕೃತಿ 'ಮಸಣ'. ಆ ಕವನದ ಅನೇಕ ಭಾಗಗಳನ್ನು ಓದಿದಾಗ ಆಂಗ್ಲ ಕವಿ 'ಗ್ರೇ'ಯ 'Elegy written in a country church-yard' ಸ್ಮೃತಿ ಪಥಕ್ಕೆ ಬರುತ್ತದೆ. ಆದರ ಪ್ರಭಾವ, ಪಡಿನೆಳಲು ಬಿದ್ದರೂ ಬಿದ್ದಿರಬಹುದು; ಸ್ವತಂತ್ರ ಕವಿ ಕಲ್ಪನೆ ಇದ್ದರೂ ಇರಬಹುದು. ಆ ಮಸಣದ ಕೆಲಸವನ್ನು ಅವರು ಹೀಗೆ ವರ್ಣಿಸಿದ್ದಾರೆ:

'ವಿಧಿಗೈದ ಬಗೆ ಬಗೆಯ ವೇಷಗಳ ಚಂದವನು
ಹುದುಗಿಸುವ ಕೆಲಸವೊಂದೇ ನೋಡಿ ಮಸಣಕ್ಕೆ!
ಜಗದೊಳುದಿಸಿದರೆಲ್ಲ ಬದುಕಿದರೆ ಧಾರಿಣಿಯು
ಅಗಲ ಸಾಕಾಗುವುದೆ ಜೀವನಗಳಾಟಕ್ಕೆ!'

Good man or bad man; he is a dead man ಎಂಬುದು ಒಂದು ಸುಂದರ ಇಂಗ್ಲಿಷ್ ಪದಬಂಧ! ಸತ್ತವನ

ಗುಣ ದೋಷಗಳ ವಿಮರ್ಶೆ ಸಲ್ಲದು; ಅದಕ್ಕೆ ಹೋಗಬೇಡ ಎಂಬುದು ಅದರ ಸರಲ ಅರ್ಥ! ಅಂತಹ ಅರ್ಥ ಬರುವ ಮಾತುಗಳು ಕೆಳಗಿನವು—

ಗುಣಗಳಿರಬಹುದು, ಅವಗುಣಗಳೇ ಇರಬಹುದು,
ಗುಣದೋಷಗಳು ಸುಟ್ಟು ಹೋದುವೈ ಚಿತೆಯೊಳಗೆ
ಹೆಣವಾದ ಮೇಲೆ ತನು ತುಲನೆ ಮಾಡುವೆಯೇಕೆ?
ಹೆಣಕೆ ಹೆಸರೊಂದೆ ವಿವಿಧತೆ ಬಹುದು ಜೀವನಕೆ'

ಎಷ್ಟು ಸೊಗಸಾಗಿ, ಎಷ್ಟು ಸುಖವಾಗಿ ಒಡಮೂಡಿದೆ ಇಲ್ಲಿ ಆ ಅರ್ಥ ಪರಂಪರೆ! ನನ್ನ ಮನಸ್ಸನ್ನು ಅಪ್ಪುಕಿ ಆಡಿದ ಇನ್ನೊಂದು ಕವನ 'ಇಂದು' ಎಂಬುದು. ಅದು ತುಂಬ ಅರ್ಥ ಗರ್ಭಿತವಾದ್ದು. ಹಿಂಡಿದಷ್ಟು ಹೆಚ್ಚುತ್ತದೆ ಆದರ ವ್ಯಾಪ್ತಿ; ಅರ್ಥ.

'ಇಂದೆಂಬ ದಿನವೆನಗೆ, ನಾಳೆಯೆಂಬುದು ನಿನಗೆ,

o o o o

ಕಳೆದ ನಿನ್ನೆಗಳೆಲ್ಲಿ? ಬರುವ ನಾಳೆಗಳೆಲ್ಲಿ?

o o o o

ಹರಿದ ನಿನ್ನೆಯ ಹುಡುಕಿ, ನಿನ್ನ ಕಾಂಬವರುಂಟೆ?

ಈ ಮೊದಲಾದ ಸಾಲುಗಳ ಅವಲೋಕನೆಯಿಂದ ಯಾರ ಮನಸ್ಸು ಪ್ರಫುಲ್ಲವಾಗದು? ಓದುವ ಹುಚ್ಚು ಹೆಚ್ಚದು?

ಶ್ರೀ ಶಂಕರ ಭಟ್ಟರು ಹೊಸತಿಗೆ ಕೈ ಚಾಚಿದವರು. ಹೊಸತಿಗಾಗಿ ಹಂಬಲಿಸುವವರು. ಹೊಸತಿನ ಹೆಸರಲ್ಲಿ ಭಾಷೆಯ ಪರಿಶುದ್ಧತೆಯನ್ನೂ, ಬಿಗಿಯನ್ನೂ ಸಡಿಲಿಸುವುದು ಅವರಿಗೆ ಸಹ್ಯವಲ್ಲ. ಪರಿಶುದ್ಧತೆಗೆ ಅವರು ಪ್ರಾಮುಖ್ಯತೆಯನ್ನು ಕೊಡುತ್ತ ಬಂದವರು. ಸ್ಖಾಲಿತ್ಯವನ್ನು ಅಸ್ಖಲಿತ ವಾಣಿಯಲ್ಲಿ ಅವರು ಹಳಿದವರು; ಈಗಲೂ ಹೀಗಳೆಯುತ್ತಾರೆ.

o o o o

ಅವರು ಕನ್ನಡ ರಸಿಕರಿಗೆ ನೀಡಿದ ಮಹೋನ್ನತ ಕಾಣಿಕೆ —'ನಲ್ಮೆ' ಆಧುನಿಕ ಕನ್ನಡ ಸಾಹಿತ್ಯದ ಸಂಪದಭಿವೃದ್ಧಿಗೆ ನೀಡಿದ ಕೊಡುಗೆ. ಈ ಕೃತಿರಚನೆಯ ಕಾಲದಲ್ಲಿ ಯಾವ ಎತ್ತರಕ್ಕೆ ಅವರ ನಿಲುವು ಏರಿತ್ತೆಂಬುದನ್ನು ಊಹಿಸಿ ಬರೆಯುವುದು ಪ್ರಯಾಸದ ಕೆಲಸ. ಆದರೂ ಅದರ ರಚನೆಯ ಕಾಲದಲ್ಲಿ ಅವರು ಚಿತ್ತ ಶುದ್ಧಿಯನ್ನೂ ಸಿದ್ಧಿಯನ್ನೂ ಪಡೆದಂತೆ ಕಾಣುತ್ತದೆ. ಅತ್ಯುನ್ನತ ಶಿಖರವನ್ನೇರದಿದ್ದಲ್ಲಿ ಅಂತಹ ಭಾವ ಪರಂಪರೆ ಹರಿದು ಬರುವುದಾದರೂ ಹೇಗೆ ಸಾಧ್ಯ? ನಿಸರ್ಗದ ವಿಲಾಸ—ವಿಭ್ರಮಗಳನ್ನು ವರ್ಣಿಸುವುದರಲ್ಲಿ, ಮನುಷ್ಯ ಮನೋಧರ್ಮವನ್ನು ವಿಶ್ಲೇಷಿಸುವುದರಲ್ಲಿ, ಅದರ ನೂರು ಮುಖಗಳನ್ನು ಚಿತ್ರಿಸುವುದರಲ್ಲಿ ಶಂಕರ ಭಟ್ಟರು ಇಲ್ಲಿ ಚರಮ ಸೀಮೆಯನ್ನು ಮುಟ್ಟಿದ್ದಾರೆ. ಅವರ ಮನಸ್ಸು ಇಲ್ಲಿ ಮುಖವನ್ನು ಪಡೆದ ಅನುಭವ ನಮಗೆ ಭಾಸವಾಗುತ್ತದೆ.

'ಮಾದ್ರಿಯ ಚಿತೆ' ನಮಗೆಲ್ಲ ತಿಳಿದಿರುವ ಕತೆ. ಆದರೆ ಮರವೆಯಿಂದದನೆತ್ತಿ ಕೊಯ್ದ ಕೀರ್ತಿ ಅವರದು. ಮುನಿಶಾಪಗ್ರಸ್ತನಾದ ಪಾಂಡು, ಕುಂತಿ–ಮಾದ್ರಿಯರೊಡಗೂಡಿ, ಶತಶೃಂಗ ತಪ್ಪಲಿನಲ್ಲಿ ಜೀವವನು ಜಗ್ಗಿಸುತ, ಭಾವವನು ಕುಗ್ಗಿಸುತ, ತನುವ ಸವೆಯುತಲಿದ್ದ. ಅವನ ಪಾಲಿಗೆ ಆ ಬದುಕು ಅವರ ಮಾತುಗಳಲ್ಲಿಯೇ ಹೇಳುವುದಿದ್ದರೆ

ಎನ್ನ ದೇವರ ಗುಡಿಗೆ ನಂದಿದಾಸೆಯ ದೀಪ
ನಿಟ್ಟುಸಿರ ಮಂತ್ರ—ಉಮ್ಮಳದ ತಂತ್ರ.
ಕೈಮುಗಿದು ಕರೆದರೂ ಬಾರದಿಹ ಸೌಖ್ಯಗಳ
ನೆನಸದುವೆ ಮೊಸಲಾಗಿಟ್ಟ ಕುಸುಮ.

ಮನದಲಿ ಜ್ಞಾನ, ಕಣ್ಣೀರಿನೊಂದಭಿಷೇಕ
ಹೊಗೆವೆದೆಯು ಕರ್ಪೂರದಾರತಿಗಳು.
ವೇದ ತತ್ವಗಳ ನಿರ್ಮಾಲ್ಯ—ಉಳಿ ಬಾಳುವೆಯು
ಬಂದೆ ಮೃತ್ಯುವ ಮೂರ್ತಿ ಪೂಜೆಯಹುದು—

ಆದರೂ ಪಾಂಡುರಾಜ ಪುರುಷ ಜನ್ಮಿ. ತನ್ನೆಲ್ಲ ಬಯಕೆಗಳನ್ನು ಅದುಮಿ ಹಿಡಿದು, ಇಂದ್ರಿಯಗಳನ್ನು ಬಿಗಿ ಹಿಡಿದು, ತನ್ನ-ಧರೆಯ ಹಂಗು ಎಂದೋ ಹರಿದುದೆಂದು ನಂಬಿ, ನಿಸ್ಸಂಗಿಯಂತೆ ದಿನ ದೂಡುತ್ತಾನೆ. ಆದರೆ ಮಾದ್ರಿಯದೋ ಬೇರೆ ಬಗೆ: ಅವಳಲ್ಲಿ ಅವನ ಚಿತ್ತಸ್ಥೈರ್ಯ ಹೇಗೆ ಬರಬೇಕು? ಕಷ್ಟ ರಾಶಿಯ ಹೊತ್ತು ಬಾಳಲೆಂದೇ ಪಳಗಿ ಬಂದ ಹೆಣ್ಣವಳು. ದೈವಬಲವಾರ್ಧಿಯಲ್ಲಿ—ಮನುಜಬಲ ತೆರೆಯೆಂದು, ಅದರೊಳಗೆ ಸುಳಿವುದೇ ಕೊರೆವುದೇ, ಗರ್ಜಿಪುದೆ ನಮ್ಮ ಪಾಡೆಂದು ಬಗೆಗೆ ತಂದುಕೊಂಡವಳು. ಹೀಗಿರುತ್ತಿರಲೊಂದು ದಿನ, ವಿಶ್ವವೇ ವಸಂತನಡಿಯ ಹಾಸಿನಂತೆ ಹರಡಿದ ದಿನ, ಪಾಂಡು ಮಾದ್ರಿಯ ಬೆಡಗು—ಬಿನ್ನಾಣಗಳಿಂದ ಆಕರ್ಷಿತನಾಗುತ್ತಾನೆ. ಮರವೆ ಮುಸುಕಿ ದಂಪತಿಗಳು ಕೂಡಿಕೊಳ್ಳುತ್ತಾರೆ. ಮುನಿಶಾಪವೋ—ವಿಧಿಯ ಸಂಕೋಪವೋ ಮುಗುಳು ತೊಟ್ಟನಿಂದ ಕೆಡೆದು ಬೀಳುವಂತೆ ಪಾಂಡು ಧರೆಗೆ ಎರಗುತ್ತಾನೆ. ಇನಿಯ ತುಟಿಯ ತೋಟ ಅಂತು ಜೀವನವನೆ ಹೀರಿಬಂತು. ಇಳೆಯ ಬುತ್ತಿ ಬೇಡ, ಅಳಲ ತುತ್ತು ಸಾಕು ಎಂದು ಮಾದ್ರಿ ಚಿತೆಯೇರುವ ಸಂಕಲ್ಪ ಮಾಡುತ್ತಾಳೆ. ಇರುಳು—ಹಗಲು, ಹುಟ್ಟು—ಸಾವು ಕೂಡುವೆಡೆಗೆ ನಡೆಯುವ ಸಿದ್ಧತೆ ನಡೆಸುತ್ತಾಳೆ. ಸಾವನ್ನು ಕೆದಕಿಕರೆಯುವ ಅವಳ ಧೃತಿಗೆ ನಾವು ತಲೆದೂಗುತ್ತೇವೆ. ಅದಕ್ಕೆ ತಲೆಬಾಗಿದ, ತಲೆದೂಗಿದ ಕವಿಗಳು ಆಡಿದ ಹಾಡಿನ ಭಾಗ ಹೀಗಿದೆ—

ದಂಡ ಹಿಡಿದು ಕೊಲುವ ಕೈಗೆ
ಇಳೆಯು ಹಳಿವ ಜೋಗಿ ಬಾಯ್ಗೆ
ದಿಂಡುಗೆಡೆದು ದೇವನಡಿಗೆ. ದುಡಿವ ಧರ್ಮ ಕರ್ಮಿಗೆ—

ಸಾವ ಸುದ್ದಿ ಕೇಳಲೊಡನೆ
ತಣ್ಣಸೇರಿ ಬಸವು ಕೆಡದೆ
ಜೀವನ ಕೈಯು ಪಾಶಕಿಂತು ಕೊರಲ ಕೊಡುವರಿರುವರೆ?

ಇದು ಕಾವ್ಯದ ರೂಪ—ರೇಖೆ. ಈ ಸಾಮಾನ್ಯವಾದ ಕತೆ, ರಸ ಋಷಿಗಳಾದ ಶಂಕರ ಭಟ್ಟರ ಕೈಯಲ್ಲಿ ಅಪೂರ್ವ ರಸ ಘಟ್ಟಿಯಾಗಿದೆ. ಒಂದು ಜೀವನ ಸಂದೇಶ ಈ ಕಲಾಕೃತಿಯಲ್ಲಿ ಹೊರ ಹೊಮ್ಮಿದೆ. ಅವರ ಆಳವಾದ ಲೋಕಾನುಭವದೊಡನೆ ಉಪನಿಷತ್ತಿನ ಋಷಿಗಳ ಕಾಲದಿಂದ ಹರಿದು ಬಂದ ವಿಚಾರಸಾರ ಬೆರೆತುಗೊಂಡು ಅದರ ಶೋಭೆ, ಯೋಗ್ಯತೆಗಳನ್ನು ಹೆಚ್ಚಿಸಿವೆ. ಅಲ್ಲಲ್ಲಿ ಈ ಅನುಭವಸಾರ ಮಿಂಚಿನಂತೆ ಮೂಡುವುದನ್ನು, ಚಿಲುಮೆಯಂತೆ ಚಿಮ್ಮುವುದನ್ನು ನಾವು ಕಾಣಬಹುದು. ಅವುಗಳನ್ನು ಅವರು ತಿಕ್ಕಿ–ತಿಣಿಕಿಸಿದಂತೆ ಕಂಡುಬರುವುದಿಲ್ಲ. ಅವು ಲೀಲಾಜಾಲವಾಗಿ ಸಹಜವಾಗಿ ಹರಿದು ಬಂದಿವೆ. ಎಲ್ಲಿಯೂ ಅವು ಔಚಿತ್ಯದ ಎಲ್ಲೆಯನ್ನು ಮೀರಿಲ್ಲ. ಸಂದರ್ಭಕ್ಕೆ ಸುಲಭವಾಗಿ ಹೊಂದಿಕೊಳ್ಳುತ್ತವೆ. ಅವು ಕಂಡು ಬರುವ ಭಾಗಗಳೆಲ್ಲ ಸರಲ, ಸುಂದರ, ಸುಭಗ! ಈ ಶಕ್ತಿಯೊಡನೆ, ಹೇಳುವುದನ್ನೆಲ್ಲ ಒಂದೆರಡು ಮಾತುಗಳಲ್ಲಿ ಹೇಳುವ ಕಲೆ ಮೈತಳೆದು ಬಂದದ್ದರಿಂದ ಅವರ ಸೊಗಸು, ಸವಿ ಇನ್ನಷ್ಟು ಹೆಚ್ಚಿದೆ.

ಓದುಗರ ಅನುಕೂಲಕ್ಕೆಂದು ಹಲಭಾಗಗಳನ್ನು ಆಯ್ದು ಕೆಳಗೆ ಕೊಟ್ಟಿದ್ದೇನೆ–

ತನು ಲೋಕ ವಿಜಯಕ್ಕೆ, ಮನೆ ಮೂಕ ಸಂಕಟಕೆ
ಆಹಹ ಎಂತಹ ಬೆಸುಗೆ ಇವಕೆ!

* * *

ಆಸೆಗಾವುದು ಮರ್ದು; ಅದರ ತೀರ್ಕೆಯೆ ಹೊರತು!

* * *

ಅನುಭವವು ಸವಿಯಲ್ಲ, ಅದರ ನೆನಪೇ ಸವಿಯು
ಅದ ಕದ್ದು ಮೇಯುದೇ ಮನವು;

* * *

ಜೀವಿಗಳ ಬಾಳ್ಕೆಯಲಿ, ಯೌವನವೆ ಸುಗ್ಗಿಯಲ
ಸುಗ್ಗಿಯೇ ವಿಶ್ವಜೀವನದ ಯೌವನವಲಾ

* * *

ಆರಾದರೇನವರ ಒಳಬಾಳು ಬೇರಿಹುದು
ಒರೆ ಬೇರೆ, ಒಳಬಾಳು ಬೇರೆ
ಜೋಡಾಗಿ ಸೇರಿದರೆ ಒಂದಾಗಿ ತೋರುವುದು
ಅದರಂತೆ ಬಾಳುವೆಯ ಮೋರೆ

* * *

ದುಗುಡವನು ಸುಖದ ಪಾಕದಲೆರೆದು ಸವಿಯುತಿಹ
ರಸಿಕರಿಗೆ ಬಾಳು, ಬಾಳುವೆಯು ಪಾಡು
ವೇದ ವೇದಾಂತಗಳ ಹೀರಿ ಬೆಳೆಯುವುದಾತ್ಮ
ಇಹದಾಸೆಯನು ಮೇದು ತಿಂಬುದೊಡಲು
ಎರಡಕೊಂದೇ ತುತ್ತ ಕೊಡುವ ನಿಶ್ಚಲ ಚಿತ್ತ
ಮನಕೆ ಬಳುವಳಿಯಾಗಿ ಬಹುದೆ ಹೇಳು!

* * *

ಆದರಂತೆ ನಮ್ಮ ಬಾಳ್ ಮರವೆ–ಮಾಯೆ!

*　　　*　　　*

ಜೀವವಿದು ತನ್ನೊಳಗೆ ತನ್ನ ಮನವನುಂಡು
ತೀವಿರಸದಲಿ ಬಣ್ಣವೇರಿ ಮೀರಿ,
ತನ್ನ ನೆಲೆಯನು ಕಂಡು ಸೇರಲದುವೇ ಬದುಕು;
ಹಲವು ದೋಹಳದಿಂದಲಾವ ಸೊಗಸು;

*　　　*　　　*

ಒಡಲು ಬೇರಾಗಲಿನ್ನದರಳತೆ ಬೇರಾಗೆ
ಆದರೊಪ್ಪ ಬೇರಾಗಿ ಮಿರುಗಲೇನು?
ಸುಖವ ದುಃಖವ ಹಿಡಿವ ಹೃದಯಂತ್ರವದೊಂದೆ
ಆದರೊಳಗಿನಿಂದೇಳ್ವ ನಾದವೊಂದೆ
ಒಂದೆ ಹೆಚ್ಚಿನ ಜೀವ–ಹಲವು ರೂಪದ ಕಾಯ
ಬಿಸುವ ಕರ್ಮದ ರಚನೆಯೆಲ್ಲವೊಂದೆ
ವಿಷಯ ವಿಷಯದಿ ಸುತ್ತಿಸುವ ಮನೋರಥವೇಗ
ಹಿರಿಯ ಜನ್ಮಕು ಕಿರಿಯ ಜನ್ಮಕುವೊಂದೆ

*　　　*　　　*

ಶಾಪವೋ ಶಾಪವಿದು—ವಿಧಿಯ ಸಂಕೋಪವಿದು
ಎಲ್ಲ ಗುಣಗಳನಿತ್ತು ಒಂದೊಂದ ಕೊಡದಿಹುದು.

*　　　*　　　*

ಈ ಮೊದಲಾದ ಸಾಲುಗಳಿಂದ ಕವಿಯ ಆಳವಾದ ಅನುಭವವನ್ನು, ಜೀವನ ದೃಷ್ಟಿಯನ್ನು, ಸಮತಾಭಾವವನ್ನು, ಕಂಡುಕೊಂಡ ಹೊಸ ದರ್ಶನವನ್ನು ಸುಲಭವಾಗಿ ಗುರುತಿಸಬಹುದು. ಅರ್ಥವತ್ತಾದ ಈ ಪದಪುಂಜಗಳು ಯಾರ ಚಿತ್ತವನ್ನೂ ಸೆಳೆಯಬಲ್ಲವು. ಅಚ್ಚಳಿಯದೆ ಹಲಗಾಲ ಉಳಿಯ ಬಲ್ಲುವು. ಆ ಒಂ

ದೊಂದು ಭಾಗವೂ ಮನೋಜ್ಞ; ರಸಿಕರಿಗೆ ರಸದೂಟ! ಅವು ಗಳಿಂದ ಒದಗುವ ರಸದೊರತೆ ಅಪೂರ್ವವಾದ್ದು. ಅದನ್ನು ವಿವರಿಸುವುದರಿಂದ ಕವಿಗೆ ಅಪಚಾರವಾದೀತು ಎಂಬ ಅಂಜಿಕೆ ನನಗೆ. ರಸಾಭಾಸವಾದೀತು ಎಂಬ ಅಳುಕು ನನಗೆ! ಇಡಿಯಾಗಿದ್ದ ಹೂವನ್ನು: ಬಿಡಿಬಿಡಿಯಾಗಿ ಬಿಡಿಸಿ, ಅದರ ಪ್ರತಿಯೊಂದು ಭಾಗವನ್ನೂ ಪರಿಚಯ ಮಾಡಿಕೊಡುವ ಪ್ರಯತ್ನ ನನ್ನದಲ್ಲ. ಅದು ವಿಜ್ಞಾನಿಯ ಕೆಲಸ. ರಸಾನುಭೂತಿಗೆ ಭಾವುಕತೆ ಅಗತ್ಯವಾದ ಹಿನ್ನೆಲೆ. ಕವಿಯ ಪರಿಚಯದಿಂದ, ಅವರ ಕೃತಿಗಳ ಸ್ಥೂಲ ಪರಿಚಿತಿಯಿಂದ, ಅವುಗಳು ಬೆಳೆದುಬಂದ ಕಾಲ, ವಾತಾವರಣದ ಸೂಕ್ಷ್ಮ ತಿಳಿವಿನಿಂದ ಅಂತಹ ಮನೋಧರ್ಮ ರೂಪುಗೊಳ್ಳಬಹುದೆಂಬುದು ನನ್ನ ಬಲವಾದ ನಂಬುಗೆ. ಈ ನಿಟ್ಟಿನಲ್ಲಿ ಹೀಗೆ ಮುಂದುವರಿದು, ಅಂತಹ ಒಂದು ವಾತಾವರಣವನ್ನು ನಿರ್ಮಿಸಿ, ರಸಾನುಭವ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಓದುಗರಿಗೇ ವಹಿಸಿಬಿಡಬೇಕೆಂಬುದು ನನ್ನ ಹಂಬಲ. ನನ್ನ ವಿದ್ಯಾರ್ಥಿ ದೆಸೆಯಲ್ಲಿ ರಿ. ಫಾ. ಪ್ರಸರ್ಪಿಯೋ–ಅನಂತರ ಬಿಷಪ್ಪರೂ ಆದ—ಅವರ ಅನೇಕ ಪ್ರವಚನಗಳನ್ನು ಕೇಳಿದ್ದೇನೆ. ಅವರು ಷೇಕ್ಸ್‌ಪಿಯರನ ನಾಟಕಗಳನ್ನು ಹೆಚ್ಚಾಗಿ ಅಭ್ಯಸಿಸಿದವರು. ನೂರು ದೃಷ್ಟಿಯಿಂದ ತೂಗಿ ನೋಡಿದವರು. ಅವರು ಷೇಕ್ಸ್‌ಪಿಯರನ ನಾಟಕಗಳನ್ನು ಅರ್ಥಸ್ಫುಟವಾಗುವ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ಓದಿ ಹೇಳುತಿದ್ದರು. ವಿವರಿಸುವ ಗೋಜಿಗೆ ಎಂದೂ ಹೋದವರಲ್ಲ. ಈ ಭಾಗಗಳು ಸುಂದರ, ಬಂಧುರ ಎಂದು ತಿಳಿಸಿ ಸುಮ್ಮನಾಗುತಿದ್ದರು. ನೀವು ಮನನಮಾಡಿ, ಅದರಲ್ಲಿ ತಲ್ಲೀನರಾಗಿ, ರಸಾನುಭವ ಮಾಡಿಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ ಸೂಚಿಸುತಿದ್ದರು. ಆ ಹಿರಿಯರ ಮಾತುಗಳನ್ನು ನನ್ನ ಸೌಕರ್ಯಕ್ಕಾಗಿ ಬಳಸಿಕೊಂಡಿದ್ದೇನೆ. ‘ನಲ್ಮೆ’, ಕಾವ್ಯಸಂಕಲ

ವನ್ನು ಕೈಗೆತ್ತಿ ತೆಗೆದುಕೊಂಡರೆ, ಒಮ್ಮೆ ಓದಿದರೆ, ಮಗುದೊಮ್ಮೆ ಓದುವ, ಓದಿ ಮೆಲುಕುಹಾಕುವ, ಅದರಲ್ಲಿ ತನ್ಮಯರಾಗುವ ಬಯಕೆ ಚಿಗುರುತ್ತದೆ. ಜೊತೆ ಜೊತೆಗೆ ಈ ಕಾವ್ಯದಲ್ಲಿ ಮನುಜ ಸಹಜ ಲೋಪ-ದೋಷಗಳ, ಬದುಕಿನ ಬನ್ನ-ಬೇಸರಿಕೆಗಳ ಪ್ರಲೋಭನೆಗಳ ವಿಧಿಯ ಆಣಕದ ಇನ್ನೊಂದು ಮುಖದ ದಿಗ್ದರ್ಶನವೂ ಆಗುತ್ತದೆ. ಆ ರಾಜದಂಪತಿಗಳ ಮನಸ್ಸಿನಲ್ಲಿ ಉಕ್ಕಿ ಪ್ರವಹಿಸುವ ಸಂಯಮಯುತ ಹಾಗೂ ಸಂಯಮರಾಹಿತ್ಯ ರಾಗಗಳು ನಮ್ಮಲ್ಲಿ ಅನುಭೂತಿಯನ್ನೂ, ಅನುಕಂಪವನ್ನೂ ಹುಟ್ಟಿಸುತ್ತವೆ. ಕವಿ ಕಲ್ಪನೆಯ ಆ ಲೋಕಕ್ಕೆ, ಆ ಕಾವ್ಯಾರಾಮಕ್ಕೆ ನಮ್ಮನ್ನೂ ಅವರೊಡನೆ ಕರೆದೊಯ್ದು, ಅವರೊಡನೆ ಬೆರೆಯುವಂತೆ ಮಾಡುತ್ತಾರೆ. ಈ ಕಾವ್ಯಖಂಡದಲ್ಲಿ, ಖಂಡಕಾವ್ಯದಲ್ಲಿ ನಾದಸಂಪತ್ತು, ಭಾಷಾ ಸಂಪತ್ತು, ಭಾವಸಂಪತ್ತು ಹಿತವಾಗಿ, ಮಿತವಾಗಿ ಮಿಳಿತವಾಗಿದ್ದು ಸಂತತವಾಗಿ ಹರಿದು ಬಂದಿದೆ.

ನಲವಿಗಿಂತಲೂ, ನೋವನ್ನು ನಿವೇದಿಸಿಕೊಳ್ಳುವುದರಲ್ಲಿ ಶ್ರೀ ಶಂಕರ ಭಟ್ಟರು ಎತ್ತಿದ ಕೈ. ಅವರ ಹೊನ್ನಿಯ ಮದುವೆ, ಮಾದ್ರಿಯ ಚಿತೆ, ಮಸಣ, ಹಳೆಯ ನೆನಹುಗಳು ಅದಕ್ಕೆ ನಿದರ್ಶನ. ದೊಡ್ಡಣ್ಣ, ಅದ್ದಿಟ್ಟು, ಹೊಡೆಯುವ ಗಡಿಯಾರ, ಮೊದಲಾದ ಕತೆಗಳನ್ನೂ ಈ ಬಗ್ಗೆ ಉದಹರಿಸಬಹುದು. ತಾಯಿಯಾಗಿ, ಗೃಹದೇವತೆಯಾಗಿ, ಮಗಳಾಗಿ, ಸೋದರಿಯಾಗಿ ಮನೆ-ಮನಗಳನ್ನು ಬೆಳಗುವ ಹೆಣ್ಣುಮಕ್ಕಳ ಬಗ್ಗೆ ಶಂಕರ ಭಟ್ಟರಿಗೆ ಹೆಚ್ಚಿನ ಅನುಭೂತಿ, ಅಭಿಮಾನ, ಅನುಕಂಪವೇನೊ? ಪಾಂಡುವಿನಂತಹ ಚಕ್ರವರ್ತಿಯ ಕೈಹಿಡಿದು ಮಾದ್ರಿ ಜೀವನದಲ್ಲಿ ಕಹಿಯನ್ನಲ್ಲದೆ, ಯಾವ ಸುಖವನ್ನು ಸವಿದಳು? ಅವಳ

ದೊಂದು ಗೋಳಿನ ಬಾಳು! ಆ ದುರಂತ ಚಿತ್ರ ಮುಂದೆ ಬಂದು ನಿಂತಾಗ 'ಹೆಣ್ಣು ನಡೆಗೆ, ಹಂದರೆಂಬ, ಮಸಣ ಎಂಬ ಗಡಿಗಳೇ' ಎಂಬ ಅನುಮಾನ ಅಂಕುರಿಸದಿರದು. ಹಾಗೆನಿಸಿದರೆ ಆಶ್ಚರ್ಯವಿಲ್ಲ.

ಓದಿ ಬಾರದಿರುವ ಬೋಧ
ಬರಲಿ ಬಾರದಿರುವ ವೇದ
ಕಾದಲೆಯರ ನಲ್ಮೆಯಿದಕೆ ಸಾಟಿ ಕಂಡರಿರುವರೆ?- ಎಂದು

ಹಾಡಿದ ಕವಿ ಈ ಅಮೃತವನ್ನು, ಜೀವನದಲ್ಲಿ ಯಥೇಚ್ಛವಾಗಿ ಆಸ್ವಾದನೆ ಮಾಡಿದವರಿರಬೇಕು! ಅದರ ನೆಲೆಯನ್ನರಿತವರಿರ ಬೇಕು. ಅದರೊಡನೆ ಸರಿತೂಗುವ ವಸ್ತು ಅಲ್ಲಿ, ಇಲ್ಲಿ, ಎಲ್ಲೂ ಎಂಬ ತೀರ್ಮಾನಕ್ಕೆ ಬಂದವರಿರಬೇಕು.

ಎಲ್ಲಿ ಕಾಂಬುದಿನಿತು ನಲ್ಮೆ
ಎದೆಯ ಕೂರ್ಮೆ ಬಲ್ಮೆ
ಮಾದ್ರಿ ಮಡಿದಳೇನು? ಅವಳ ಹಿಡಿದ
ಮೃತ್ಯು ಮಡಿದುದೂ—
ಮಡಿಯಲಾರದವಳ ಮೂರ್ತಿ!
ಮಾಸಲಾರದವಳ ಕೀರ್ತಿ!
ಜನವ ಕೈಯ ಸೊಡರ ಬೆಳಗಲವಳ ಚಿತೆಯ ಕೆಂಡವೂ'

ಎಂಬ ಭಾವ ಬಲಿಯದಿರದು.

○ ○ ○ ○

ಈ ಹೊತ್ತಗೆಯಲ್ಲಿನ ಇನ್ನೆರಡು ಕವನಗಳು 'ಹೊನ್ನಿಯ ಮದುವೆ', 'ಮುರಲೀನಾದ' 'ಮಾದ್ರಿಯ ಚಿತೆ'ಯ ಹಂತಕ್ಕೆ ಏರಿದವು ಎನ್ನಲಾರೆ. ಹೊನ್ನಿಯ ಮದುವೆಯಲ್ಲಿನ ಕತೆಯನ್ನು ಹೀಗೆ ಸಂಗ್ರಹಿಸಿ ಹೇಳಬಹುದು;

ಕುರುಡನಾದರೂ ಬರಡಾಗದ ಮನವುಳ್ಳ ಊರ ಹೊರಗೆ ಹರಡದ ಹೆಸರಿನ ಗುರಿಕಾರ. ಮುಪ್ಪಿನ ಸಂಗಡಿತಿಯಾಗಿ, ಬಾಳಿನ 'ಆಳಿಯಾಗಿ', ಹೆಂಡತಿ ಜೀವಕ್ಕೆ ಕಳೆಕೊಟ್ಟು ಬಂದ ಒಬ್ಬಳೇ ಮಗಳು ಹೊನ್ನಿ. ಆ ಪ್ರೇಮದ ಬಿತ್ತನು, ಜೀವದ ಸೊತ್ತನು ಕೊಡಬೇಕೇ ದೊರೆಯಲು ನಂಟು ಎಂಬ ಶಂಕೆ ಕೈಯೊಡನೆಯು ಕೊಟ್ಟರೆ ಹೆರವರಿಗದು, ತನಗೇನಿಹುದು, ಎಂಬ ಆತಂಕ. ಆದರೂ ನಾಡಿನ ಗೌಡನ ಮಗನಿಗೆ ಧಾರೆಯೆರೆದು ಕೃತಾರ್ಥನಾಗುವ ಬಯಕೆ ಆ ಹಿರಿಯನದು. ಹೊನ್ನಿ ಪ್ರಾಪ್ತ ವಯಸ್ಕಳಾಗುತ್ತಾಳೆ.

ನೋಟಕೆ ಕೊಂಕುತ
ಕೂಟಕೆ ಹಿಂಗುತ
ಆಟಕೆ ನಾಚುತ ತೊಲಗುತ್ತ
ಸುಗ್ಗಿಯ ಮೊದಲಿನ
ಕೋಗಿಲೆ ಹುಗಿಲಿನ

ಬುಗ್ಗೆಯೆನಲೂ ಸೋರುವ ಚಿತ್ತದವಳಾಗಿ ಅವಳು ಯೌವನದಲ್ಲಿ ಪದಾರ್ಪಣ ಮಾಡುತ್ತಾಳೆ. ಕದಡು ನಗೆ ಇದ್ದುದರಿಂದ ಶೈಶವವಲ್ಲ; ಮದವಿಲ್ಲದ ಮನವಿದ್ದುದರಿಂದ ಯೌವನವಲ್ಲ ಎಂದು ಮುಂತಾಗಿ ಕವಿಗಳು ಅವಳ ಆಗಿನ ಹಾವ-ಭಾವಗಳನ್ನು, ಮಾನಸಿಕ ಸ್ಥಿತಿಯನ್ನು ಹೃದಯಂಗಮವಾಗಿ ಚಿತ್ರಿಸಿದ್ದಾರೆ. ಅವಳ ಅಂಗಾಂಗಗಳ ವರ್ಣನೆಗಿಂತಲೂ ಅವಳ ಆಂತರಂಗಿಕ ಸ್ಥಿತಿಯನ್ನು ಹೊಮ್ಮಿಸುವುದು ಆವಶ್ಯವೆಂದು ಕಂಡುಕೊಂಡು ಅದಕ್ಕೆ ಪ್ರಾಧಾನ್ಯವನ್ನು ಕೊಟ್ಟಿದ್ದಾರೆ. ಹರೆಯದವರ ಎದೆಯನ್ನು ಎರಗುವ ದುರ್ವಿಧಿ ಅವಳನ್ನೂ ಕಾಡಿತು. ಅವಳು ಚೆನ್ನನಿಗೆ ಸೋಲುತ್ತಾಳೆ. ಆಕೆಯ ಮೈ—ಮನಗಳೆಲ್ಲ ಆತನಿಗೆ ಮೀಸಲು.

ಅವರೀರ್ವರೊಳಗಿನ ಅಂತರ ಸೌಭಾಗ್ಯ ಸಾಗರದ ಆಚೀಚಿನ ದಡಗಳಾದರೂ ಒಬ್ಬರಲ್ಲಿ ಒಬ್ಬರು ಬೆರೆತು ಹೋಗುತ್ತಾರೆ. ಪ್ರೇಮದ ಮುಂದೆ ಆ ಅಂತರಗಳೆಲ್ಲ ಕರಗಿ ನೀರಾಗುತ್ತವೆ.

ಹಣ ಕಾಸುಗಳಾ—
ಡುವ ಕೈಹಿಡಿದರೆ

'ಮನವೂ ಹಿಡಿಯಲಿ ದೊರಕುವುದೇ' ಎಂಬ ಆತಂಕ ನಮ್ಮಲ್ಲೂ ಮೂಡುತ್ತದೆ. ಹೀಗಿರಲು ಗುರಿಕಾರನನ್ನು ಎಚ್ಚರಿಸಿ, ನಾಡಿನ ಹಿರಿಯರು ಹೊನ್ನಿಯ ಮದುವೆಯನ್ನು ಗೌಡನ ಮಗನೊಡನೆ ನಡೆಸುವ ವ್ಯವಸ್ಥೆ ಮಾಡುತ್ತಾರೆ. ಚೆನ್ನನಿಗೆ ಎಲ್ಲವನ್ನು ಅಡವು ಬರೆದ ಹೊನ್ನಿಗೆ ನಾಡಿನ ಗೌಡನ ಮಗನೊಡನೆ ಮದುವೆ ನಿಲ್ಲುವುದು ಸರಿಬೀಳುವುದಿಲ್ಲ. ಮನದೊಲವಿಲ್ಲದ ಹೆಣ್ಣೊಬ್ಬಳನ್ನು ಗಂಡೊಬ್ಬನ ಮನೆಗೆ ಕಳುಹುವುದು ಹೆಣ್ಬಲಿ ಎಂದು ಅವಳು ಹಲುಬುತ್ತಾಳೆ. ಪರಸ್ಪರ ಒಪ್ಪಿಕೊಂಡು, ತಪ್ಪೊಪ್ಪುಗಳನ್ನು ಅರಿತುಕೊಂಡು ಒಂದಾಗೂಡುವ ಮಧುರ ಮಿಲನದ ಹಿರಿಮೆಯನ್ನು ಇಲ್ಲಿ ಕವಿಗಳು ಸೂಚಿಸುವ ಸಾಹಸ ಮಾಡಿದ್ದಾರೆ. ಒಗ್ಗದ ದಾಂಪತ್ಯಕ್ಕೆ ಹೇರೆತ್ತಿನಂತೆ ಹೆಗಲೊಡ್ಡುವುದಕ್ಕಿಂತಲೂ ಸಾಯುವುದೇ ಸುಖವೆಂದು, ಆ ತುಂಬು ಯೌವನದಲ್ಲಿ ಸಾವನ್ನು ಕೆದಕಿ–ಬೆದಕಿ ಆಹ್ವಾನಿಸುತ್ತಾಳೆ. ಇತ್ತ ಮದುವೆಯ ಮುಹೂರ್ತ ಸನ್ನಿಹಿತವಾಗುತ್ತದೆ. ಅತ್ತ ಹೊನ್ನಿ–ಚೆನ್ನರು ಕೈ–ಕೈ ಹಿಡಿದು ತೆರೆಗಳೊಡನಾಡುತ್ತ, ಕಟ್ಟುಗಳಿಲ್ಲದ, ಕಟ್ಟಳೆಗಳಿಲ್ಲದ ಕಡಲಿನ ಆಳಕ್ಕೆ ಇಳಿಯುತ್ತಾರೆ. ಮುದುಕನಿಗೆ ಈ ವರ್ತಮಾನ ತಿಳಿಯುತ್ತದೆ, ಭೇದಗೊಂಡ ಅವನು ಮಗಳನ್ನರ ಸಹೋದನೋ ಎಂದು ಭಾಸವಾಗುವ ರೀತಿಯಲ್ಲಿ ಅಸುನೀಗುತ್ತಾನೆ. ಮದುವೆಯ ಹಂದರವು ಮಸಣದ ನಾಡ ಆಗುತ್ತದೆ.

ಕತೆ ಬೆಳೆದ ರೀತಿ, ಅದಕ್ಕೆ ಪೂರಕವಾಗಿ ಬಂದ ಸರಸ—ಸುರಸ ಸಂಭಾಷಣೆ, ಅವುಗಳಲ್ಲಿ ಹುದುಗಿರುವ ಧ್ವನಿ, ಸರಲಪದ-ಗಂಭೀರ ಅರ್ಥ ಕಾವ್ಯಕ್ಕೆ ಕಳೆಕೊಟ್ಟವೆ.

ಇದರಲ್ಲಿ ಬರುವ ಪ್ರಕೃತಿ ವರ್ಣನೆ,ಕಾರ್ಗಾಲದ ವರ್ಣನೆ ರಸಪೂರ್ಣ; ರಮ್ಯಮನೋಹರ, ಔಚಿತ್ಯಪೂರ್ಣ ಅರ್ಥವನ್ನು ಮೂಡಿಬರುವ ಧ್ವನಿಯೇ ಮಾಡಿಕೊಡುತ್ತದೆ. ಅವರ ಕಾರ್ಗಾಲದ ವರ್ಣನೆಯನ್ನು ಓದುವಾಗ ಅದು ನಮ್ಮ ಮುಂದೆ ನಿಂತಂತೆ ಭಾಸವಾಗುತ್ತದೆ.

ಮುಗಿಲಿನ ಹುಬ್ಬಿನ
ಗಂಟಿಕ್ಕಿತ ಬಿರು
ದನಿಯಲಿ ಬೆದರಿಸುತಿಹನಲ್ಲ
ನಲ್ಲನೆನುತೆ ಆ
ಗಸವೆಣ್ಣಾಗುತೆ
ಸುರಿಸಿದ ಕಣ್ಣೀರ್ವೊನಲೆಲ್ಲ.

ಅಲಂಕಾರಿಕವಾದ ಈ ಮಾತುಗಳು ಎಷ್ಟು ಭಾವಪೂರ್ಣ; ರಸಪೂರ್ಣ; ಅರ್ಥಪರಿಪೂರ್ಣ? ಶಂಕರ ಭಟ್ಟರು ಪ್ರಾಸಾದಿಕ ಕವಿಗಳು ಮಾತ್ರವಲ್ಲ; ಪ್ರಗತಿಪರರಾದ ಕವಿಗಳು. ಅರ್ಥಕ್ಕೂ, ಶಬ್ದಕ್ಕೂ, ಒಟ್ಟಿನ ಪರಿಣಾಮಕ್ಕೂ ಏಕರೀತಿಯ ಪ್ರಾಮುಖ್ಯ ಕೊಟ್ಟವರು. ಮನಸ್ಸು ಮಾಡಿದರೆ ಯಾವ ಹಂತಕ್ಕೂ ಏರಬಲ್ಲರು; ಯಾವ ಮಜಲಿನಲ್ಲಿ ವಿಹರಿಸಬಲ್ಲರು ಎಂಬುದಕ್ಕೆ ಈ ಕಾವ್ಯ ಜೀವಂತ ಸಾಕ್ಷಿಯಾಗಿ ನಿಲ್ಲಬಲ್ಲುದು. ಕಳೆದ ಕಾಲು ಶತಮಾನದಲ್ಲಿ ಕನ್ನಡದಲ್ಲಿ ಬಂದ ಒಂದು ಅಪೂರ್ವಕೃತಿ 'ನಲ್ಮೆ'

'ನಮಗಿಂದು ಬೇಕಾಗಿರುವುದು ಒಂದು ಜಗನ್ನಾಥ ವಿಜಯವಲ್ಲ; ಕೆಚ್ಚಿನ ಕಿಡಿಯನ್ನು ಹುಟ್ಟಿಸುವ 'ಗದಾಯುದ್ಧ' ಎಂದು ಹಿರಿಯರಾದ ಶ್ರೀ ಡಿ. ವಿ. ಜಿ. ಅಪ್ಪಣೆಕೊಡಿಸಿದರು.

ಕನ್ನಡ ನಾಡಿನಲ್ಲಿ ನಲ್ಮೆಯ ಅಮೃತ ವರ್ಷವಾಗಲಿ ಎಂದು ನಾನು ಕಳಕಳಿಯಿಂದ ಪ್ರಾರ್ಥಿಸುತ್ತೇನೆ.'

ದಕ್ಷಿಣ ಕನ್ನಡ ಜಿಲ್ಲೆಯ ಕವಿಗಳ ಕುರಿತು ಮಾತ ನಾಡುತ್ತ ಒಂದು ಖಾಸಗಿ ಸಂಭಾಷಣೆಯಲ್ಲಿ ಹಿರಿಯರಾದ ಶ್ರೀ ಶಿವರಾಮ ಕಾರಂತರು ಶಂಕರ ಭಟ್ಟರು ಕನ್ನಡ ಜಿಲ್ಲೆಯ ಅತ್ಯಂತ ಪ್ರತಿಭಾಸಂಪನ್ನರಾದ ಕವಿಗಳೆಂಬುದು ತಮ್ಮ ಖಚಿತ ವಾದ ಅಭಿಪ್ರಾಯವೆಂದು ಸೂಚಿಸಿದರು. ಶ್ರೀ ಕಾರಂತರು ಭಾರ ವಾದ ಮಾತಿಗೆ ಹೆಸರುಗಳಿಸಿದವರು. ಅವರು ಎಂದೂ ಯಾರ ದಾ ಕ್ಷಿಣ್ಯಕ್ಕೂ ಬಲಿಯಾದವರಲ್ಲ; ಬಲಿಬೀಳುವವರೂ ಅಲ್ಲ. ಅಂತಹ ಕಟ್ಟು ವಿಮರ್ಶಕರ ಎದೆಯಾಳದಲ್ಲಿ ಒಂದು ಗಣನೀಯ ಸ್ಥಾನ, ಗೌರವ ಇದೆ, ಎಂದಾದ ಮೇಲೆ ಅನ್ಯರ ಶಿಫಾರಸು ಅನಗತ್ಯ. ಶಂಕರ ಭಟ್ಟರ ವಿಶಿಷ್ಟ ಯೋಗ್ಯತೆಗೆ ಈ ಒಂದು ಅಭಿಪ್ರಾಯ ಸಾಕು.

o o o o

'ಮುರಲೀನಾದ' ಈ ಸಂಗ್ರಹದಲ್ಲಿನ ಇನ್ನೊಂದು ಕವನ. ಅದರ ಕತೆ–ಸಂವಿಧಾನಗಳನ್ನು ವಿವರಿಸಿ, ಈಗಾಗಲೇ ಸಾಕಷ್ಟು ಬೆಳೆದ ಭಾಷಣವನ್ನು ಇನ್ನಷ್ಟು ಬೆಳೆಸುವುದು ನನಗೆ ಸರಿಬೀಳು ವುದಿಲ್ಲ. ಅದರಲ್ಲಿ ಬರುವ ಸಾಲುಗಳಲ್ಲಿ ಒಂದೆರಡನ್ನು ಆಯ್ದು, ಅದರ ಸವಿಯನ್ನು ನಿಮಗೂಡಿಸಿದರೆ ಸಾಕೆಂದು ತಿಳಿಯುತ್ತೇನೆ.

'ನಾಳೆಯ ಮಾತದು ಸಾವೆಂದೆನಲು
ತೋಳಿನ ಸೆರೆಯೊಳೆ ಇಂದಿನ ಬಾಳು

o o o

ತೋಳಿನ ಸೆರೆ ಸಾವನು ಮರೆಸುವುದು
ಬಾಳುವ ತತ್ವವನದೆ ತಿಳಿಯಿಪುದು

೦ ೦ ೦

ತಪ್ಪಾವುದೊ, ಒಪ್ಪಾವುದೊ ನಮಗೆ
ಇಷ್ಟೊಂದೇ ಬದುಕಾಗಿಹ ಜನಕೆ

೦ ೦ ೦

ನೇಹವೋ? ಅದು ಬೆಳಗಿನ ಹನಿಮಂಜು;
ಮೋಹವೋ? ಜೀವನ ಹೀರುವ ನಂಜು;

೦ ೦ ೦

ಮೊಗವನು ಮುಸುಕಿದೆ ಗಂಟಿನ ಹುಬ್ಬು;
ನಗೆಯನು ಮುಸುಕಿದೆ ಚಿಂತೆಯ ಮಬ್ಬು;
ಪ್ರಾರಂಭದ ಮಧುಮಾಸದೊಳಿಂತು
ಆರಂಭಿಸಿತೀ ಮಾಗಿಯ ತಂಪು

ಪ್ರೇಮದ ಮೂರು ಪ್ರಕಾರಗಳನ್ನು ನಿರೂಪಿಸುವ ಮೂರು ಕವನಗಳ ಸಂಗ್ರಹ 'ನಲ್ಮೆ.' ಅದಕ್ಕೆ ಕೊಟ್ಟ ಹೆಸರಿನಲ್ಲಿ ಔಚಿತ್ಯವೂ-ಅರ್ಥವೂ ಇದೆ. ಹೆಸರನ್ನಿಡುವಲ್ಲಿಯೂ ಶಂಕರ ಭಟ್ಟರು ತಮ್ಮ ಜಾಣ್ಮೆಯನ್ನು ಪ್ರದರ್ಶಿಸಿವ್ದಾರೆ.

ನಲ್ಮೆಯನ್ನು ನೀಡಿದ ಮೇಲೆ ಅವರ ಕಾವ್ಯಗಂಗೆ ಬತ್ತುತ್ತ ಬಂದಿದೆ. ತಮ್ಮಲ್ಲಿ ಸುಪ್ತವಾಗಿದ್ದ ಈ ಅದ್ಭುತ, ಅನ್ಯಾದರ್ಶ ಪ್ರಾಯವಾದ ಕ್ರಿಯಾಶಕ್ತಿಯನ್ನು, ಪ್ರತಿಭೆಯನ್ನು ಶಂಕರ ಭಟ್ಟರು ಪೂರ್ಣವಾಗಿ ಬಳಸಿಕೊಂಡಂತೆ ಕಂಡು ಬರುವುದಿಲ್ಲ. ದೈನಂದಿನ ದುಡಿಮೆ (ಅವರು ಹಚ್ಚಿಕೊಂಡ ಪತ್ರಿಕೋದ್ಯಮ) ಅವರ ಈ ಶಕ್ತಿಯನ್ನು ದೊಡ್ಡ ಪ್ರಮಾಣದಲ್ಲಿ ಹ್ರಾಸಗೊಳಿಸಿದೆ,

ಅವರು ಎಂದಾದರೂ ಮಹಾಕವಿ ಮಿಲ್ಟನನಂತೆ 'and that one talent, which is death to hide, has lodged with me useless' ಎಂದು ತಮ್ಮ ಪಾಡಿಗೆ ತಾವೇ ಹಾಡಿಕೊಂಡು, ಅವನಂತೆಯೇ ಒಂದು ಮಹಾಕೃತಿ ರಚನೆಯಲ್ಲಿ ಪ್ರವೃತ್ತರಾಗಬಹುದೇನೊ ಎಂದು ಕನ್ನಡ ಲೋಕ ಆಸೆ ಹಿಡಿದಿದೆ.

೦ ೦ ೦

ಅವರು ಬರೆದ ಮೂರು ಕಾದಂಬರಿಗಳು: ಧೂಮಕೇತು, ದೇವತಾ ಮನುಷ್ಯ, ಲೋಕದ ಕಣ್ಣು. ಈ ಕಾದಂಬರಿಗಳ ಕುರಿತು ನನ್ನ ಅಭಿಪ್ರಾಯ ಅಷ್ಟೇನೂ ಹಿತವಾದ್ದು ಎಂದು ಹೇಳಲಾರೆ. ಹಿರಿಯರಾದ ಅವರ ಕೃತಿಗಳ ಕುರಿತು ಮಾತನಾಡುವಾಗ ನಾಲಿಗೆಯನ್ನು ಒಂದಿಷ್ಟು ಬಿಗಿಹಿಡಿದಿದ್ದರೆ ಒಳ್ಳೆಯದಿತ್ತು ಎಂದು ಹಲವರು ಜರೆಯಬಹುದು. ಅವರ ಧೂಮಕೇತು ಕಾಣಿಸಿಕೊಂಡಾಗಲೇ ಶಂಕರ ಭಟ್ಟರು ಕಾದಂಬರಿ ಕ್ಷೇತ್ರಕ್ಕೆ ಕಾಲಿಡಬಾರದಿತ್ತು ಎಂಬ ಅಭಿಪ್ರಾಯಕ್ಕೆ ನಾನು ಬಂದವ. ಅನಂತರದ ಎರಡು ಕಾದಂಬರಿಗಳನ್ನು ಓದಿದ ಮೇಲೆ ನನ್ನ ಆ ಹಿಂದಿನ ಅಭಿಪ್ರಾಯಕ್ಕೆ ಗಟ್ಟಿಯಾಗಿ ನಾನು ಅಂಟಿಕೊಂಡಿದ್ದೇನೆ. ಗುಣದಲ್ಲಿ ಆ ಕಾದಂಬರಿಗಳು ಈಚೆಗೆ ಬಂದ ಎಷ್ಟೋ ಕಾದಂಬರಿಗಳಿಗಿಂತ ಮೇಲ್ಮಟ್ಟದವು. ಆದರೂ ದೊಡ್ಡ ಕಾದಂಬರಿಗಳ ಗುಣ–ವೈಶಿಷ್ಟ್ಯಗಳು ಅವುಗಳಲ್ಲಿ ಇಲ್ಲ. ಬರಿಯ ಕತೆಯನ್ನೋದುವ ಆಸಕ್ತಿಯುಳ್ಳವರನ್ನು ಅವರ ಕಾದಂಬರಿಗಳು ತಣಿಸಬಹುದು. ಕತೆ ಹೆಣೆಯುವುದಷ್ಟೆ ಕಲಾವಂತಿಕೆಯಲ್ಲ ಎಂಬುದನ್ನರಿತ ವಿಮರ್ಶಕರಿಗೆ ಅವರ ಕಾದಂಬರಿಗಳಲ್ಲಿ ಯಾವ ಆಧಾರವೂ ದೊರಕದು. ಆದರೆ ಕಾದಂಬರಿಯಲ್ಲಿ ಬಳಸಿದ ಭಾಷೆ

ತುಂಬ ಮನೋಜ್ಞ. ಅದು ಕೊಡುವ ಸುಖಕ್ಕಾಗಿ ಅವುಗಳನ್ನು ಓದಬೇಕು. ಇಲ್ಲವಾದರೆ ಅವು ಸಪ್ಪೆ ಎನಿಸಬಹುದು.

೦ ೦ ೦

ಅವರ ಹಿಡಿಂಬೆ, ಯಜ್ಞಕುಂಡ, ಗುರುದಕ್ಷಿಣೆ ನಾಟಕಗಳ ಕುರಿತು ಒಂದೆರಡು ಮಾತು. ಅದರಲ್ಲಿ ಬರುವ ಸಂಭಾಷಣೆಗಳು ತುಂಬ ಕೃತಕವಾಗಿ ಕಾಣುತ್ತವೆ. ಅವರ ನಾಟಕಗಳಲ್ಲಿ ಬರುವ ಎಲ್ಲ ಪಾತ್ರಗಳು ಅವರಂತೆ ವಿದ್ವಾಂಸರು; ಪಂಡಿತರು, ಪಾತ್ರಗಳು ಬಳಸುವ ಮಾತಿನಲ್ಲಿ ಗತ್ತು—ತೂಕ ಅತಿ. ರಸ ಪೋಷಣೆಗೂ—ಪಾತ್ರ ಪೋಷಣೆಗೂ ಬೇಕಾದ ಆವರಣವನ್ನು ನಿರ್ಮಿಸುವುದರಲ್ಲಿ ಅವರು ಕೃತಕೃತ್ಯರಾಗಲಿಲ್ಲ. ಸಂಭಾಷಣೆಯಲ್ಲಿ ಬಳಸಿದ ಮಾತಿನ ಈಡಿಗೆ ಯಾರೂ ತಲೆದೂಗದಿರರು. ಅವು ಅಷ್ಟು ಅಚ್ಚ; ಸ್ವಚ್ಛ. ಅಶುದ್ಧ ಪ್ರಯೋಗವನ್ನು ಕಂಡರೆ ಶಂಕರ ಭಟ್ಟರು ರೇಗುತ್ತಾರೆ. ಸುಲಭಗೊಳಿಸುವ ಹೆಸರಿನಲ್ಲಿ ಭಾಷೆಯು ಹತ್ಯೆಯಾಗುತ್ತಿದೆ ಎಂಬುದು ಅವರ ಸ್ಪಷ್ಟ ಅಭಿಮತ. ಅವರ ನಾಟಕಗಳಲ್ಲಿ ಬರುವ ಸರಸ ಮಾತುಗಾರಿಕೆಗೆ ಸೋತ ನಾನು ಅವುಗಳನ್ನು ಅನೇಕ ಬಾರಿ ಓದಿದ್ದೇನೆ, ಓದಿ ಆನಂದಿಸಿದ್ದೇನೆ; ಆದರೆ ಎಂದೂ ಮೆಚ್ಚಿಕೊಂಡವನಲ್ಲ. ಅವರ ನಾಟಕ–ಕಾದಂಬರಿಗಳು ಸಾಮಾನ್ಯ ದರ್ಜೆಗೆ ಸೇರಿದವು ಎಂಬುದು ನನ್ನ ಖಚಿತ ಅಭಿಪ್ರಾಯ.

೦ ೦ ೦

ದಿವಂಗತ ಪಂಜೆಯವರು ಈ ಭಾಗದಲ್ಲಿ ಸಣ್ಣ ಕತೆಗಳ ಬರವಣಿಗೆಗೆ ಚಾಲನೆಯನ್ನು ಕೊಟ್ಟವರು. ಆದರೂ ಅದರ ಹುಲುಸಾದ ಬೆಳೆಯನ್ನು ತೆಗೆದವರು ಶ್ರೀ ಶಂಕರ ಭಟ್ಟರು. 'ಹಿಂದಿನ ಕತೆಗಳು', 'ಗಾಜಿನ ಬಳೆ ಮತ್ತು ಇತರ ಕತೆಗಳು', 'ದುಡಿಯುವ ಮಕ್ಕಳು' ಅವರ ಕಥಾಗುಚ್ಛಗಳು. ಚೂರಿಯ

ಕತೆ ಎಂಬ ನೀಳ್ಗತೆಯನ್ನೂ ಬರೆದಿದ್ದಾರೆ–ಅವರ ಸಣ್ಣಕತೆಗಳು ಕನ್ನಡದ ಶ್ರೇಷ್ಠ ಕತೆಗಳ ಕೂಟಕ್ಕೆ ಸೇರಿದವು.

ಅವರ ಎಲ್ಲ ಕತೆಗಳ ಆರಂಭ—ಅಂತ್ಯಗಳಲ್ಲಿ ಒಂದು ವೈಶಿಷ್ಟ್ಯವಿದೆ. 'ದೊಡ್ಡಣ್ಣ' ಕಥೆಯ ಆರಂಭದ ವಾಕ್ಯ 'ದೊಡ್ಡಣ್ಣನಾಗಿ ಹುಟ್ಟುವುದಕ್ಕೆ ಸರ್ವಸಾಮಾನ್ಯವಾದ ಪುಣ್ಯ ಸಾಲದು' ಅಥವಾ ಇನ್ನೊಂದು ಕತೆಯಲ್ಲಿನ 'ಐಶ್ವರ್ಯದ ದಾರಿ ಕಳ್ಳದಾರಿ' ಇದರ ಪುಷ್ಟಿಗಾಗಿ ಉದಾಹರಿಸ ಬಹುದು, ಅವರು ಸೃಷ್ಟಿಸಿದ ಶ್ಯಾಮಲ, ಶಾರದೆ, ಸುಶೀಲೆಯರು ಬಹಳ ಕಾಲ ನಮ್ಮ ಸ್ಮೃತಿ ಪಥದಲ್ಲಿ ಉಳಿಯಬಲ್ಲರು. ಅವರು ಕಡೆದು ನಿರ್ಮಿಸಿದ ಪಾತ್ರಗಳು ಸಜೀವ; ಸಚೇತನ. ಅವುಗಳಲ್ಲಿ ನಾವು ಋಜುತೆಯನ್ನೂ ನೈಜತೆಯನ್ನೂ ಕಾಣಬಹುದು ಸಣ್ಣ ಕತೆಗಳ ತಂತ್ರ ಅವರ ಹಸ್ತಗತವಾಗಿದೆ.ಅವರ 'ಅದೃಷ್ಟ', 'ಹೊಡೆಯುವ ಗಡಿಯಾರ' 'ದೊಡ್ಡಣ್ಣ' ಮೊದಲಾದ ಕತೆಗಳು ಕನ್ನಡದಲ್ಲಿ ಬಂದ ಕೆಲವೇ ಶ್ರೇಷ್ಠ ಕತೆಗಳ ಸಾಲಿಗೆ ಸೇರಿದುವು. ಆ ಕತಗಳೆಲ್ಲ ಕಲಾತ್ಮಕವಾಗಿವೆ.

ಅವರ ಒಳ್ಳೆಯ ಕಾವ್ಯಗಳು, ಕತೆಗಳು ಅವರ ವೈ ಮನಸ್ಸುಗಳು ತುಂಬಿದ್ದಾಗ ಹರಿದುಬಂದುವು. ಅದು ಕಾರಣ ಅವುಗಳಲ್ಲಿ ನೆಚ್ಚು—ನೇಹ, ಕೆಚ್ಚು–ಉತ್ಸಾಹ, ಸ್ವಾತಂತ್ರ್ಯ ಪ್ರಿಯತೆಗಳು ಅಚ್ಚೊತ್ತಿರುವುದನ್ನು ಗುರುತಿಸಬಹುದು. ಅವರ ಇತ್ತೀಚಿನ ಬರವಣಿಗೆಗಳಲ್ಲಿ ಅವುಗಳ ಪ್ರಮಾಣ ಕಡಿಮೆ.

೦ ೦ ೦

ಅವರ ಇತರ ಬರವಣಿಗೆಗಳು ಬಾಹುಳ್ಯದಲ್ಲಿ ಕಡಮೆಯಲ್ಲ. ದೇಶದ ಶೈಕ್ಷಣಿಕ, ಆರ್ಥಿಕ, ರಾಜಕೀಯ, ಸಾಮಾಜಿಕ

ಸಮಸ್ಯೆಗಳಿಗೆ, ಅವು ಉದ್ಭೂತವಾದಾಗಲೆಲ್ಲ, ತಮ್ಮ ಪರಿಹಾರವನ್ನು ತಮ್ಮ ಪತ್ರಿಕೆಯ ಅಗ್ರ ಲೇಖನಗಳ ಮೂಲಕ ಹೊರಗೆಡವಿದ್ದಾರೆ. 'ರಾಷ್ಟ್ರಬಂಧು' 'ರಾಷ್ಟ್ರಮತ'ಗಳಲ್ಲಿ ಬಂದ ಅಗ್ರಲೇಖನಗಳು ಸಾಹಿತ್ಯ ದೃಷ್ಟಿಯಿಂದ ಸಂಗ್ರಹಾರ್ಹ. ಅವುಗಳ ಸಂಕಲನದಿಂದ ಶುಚಿಯಾದ–ರುಚಿಯಾದ ಒಂದು ವಿಶಿಷ್ಟ ಪ್ರಕಾರದ ಸಾಹಿತ್ಯದ ನಿರ್ಮಿತಿಯಾಗಬಹುದು.

ಅವರು ವಾರವಾರವೂ ಪತ್ರಿಕೆಯಲ್ಲಿ ಬರೆದ 'ಅಲ್ಲಿಷ್ಟಿಷ್ಟು' ಭಾಗವನ್ನುಆಯ್ದು ಒಂದೆಡೆ ಕಲೆಹಾಕಿದರೆ ಉತ್ಕೃಷ್ಟ ವಿಡಂಬನ ಸಾಹಿತ್ಯ ಕನ್ನಡಕ್ಕೆ ದೊರಕಿದಂತೆ ಆದೀತು. ಕನ್ನಡದ ಇಂದಿನ ಕೊರತೆಯನ್ನು ಅದು ತುಂಬಿಕೊಡಬಹುದು. ಆ ಪ್ರಯತ್ನ ನಡೆದರೆ ಕನ್ನಡದ ಭಾಗ್ಯದ ಬಾಗಿಲು ತೆರೆದಂತೆ.

ಶಂಕರ ಭಟ್ಟರು ಸಾಹಿತ್ಯ ಕ್ಷೇತ್ರದಲ್ಲಿ ಹೀಗೆ ಬಹುಮುಖವಾದ ಕೆಲಸ ಮಾಡಿದವರು.(ಸೇವೆ ಎಂದು ಹೇಳುತಿದ್ದೆ. ಆದರೆ ಆ ಶಬ್ದಕ್ಕಿರುವ ಅರ್ಥವ್ಯಾಪ್ತಿಯೇ ಈಚೀಚೆಗೆ ಕೆಟ್ಟು ಹೋಗಿದೆ. ಆದು ಕಾರಣ ಆ ಶಬ್ದವನ್ನು ಬುದ್ಧಿಪೂರ್ವಕವಾಗಿ ಬಿಟ್ಟುಬಿಟ್ಟಿದ್ದೇನೆ.) ಅದರ ಹಲವು ಪ್ರಕಾರಗಳಲ್ಲಿ ಪ್ರಯೋಗ ನಡೆಸಿ ಸಿದ್ಧಿಯನ್ನು ಪಡೆದವರು. ನಮ್ಮ ಸುದೈವದಿಂದ ಇನ್ನೂ ನಮ್ಮ ಮಧ್ಯೆ ಇದ್ದು ನಿಟ್ಟನಲ್ಲಿಯೇ ಮುಂದುವರಿಯುತ್ತಿದ್ದಾರೆ. ಅವರ ಕಾವ್ಯಗಳನ್ನು ಓದುವುದೆಂದರೆ, ಅವರೊಡನೆ ಕುಳಿತು ಮಾತನಾಡುವುದು ಎಂದರೆ ಒಂದು ತೀರ್ಥಯಾತ್ರೆಯ ತೃಪ್ತಿ, ಸಮಾಧಾನ ಮನಸ್ಸಿಗಾಗುತ್ತದೆ.

ಶಂಕರ ಭಟ್ಟರು ಸಾಹಿತ್ಯದಲ್ಲಿ ಸದಭಿರುಚಿಯನ್ನು ಕೆರಳಿಸಿದವರು. ರುಚಿಯಾದ–ಶುಚಿಯಾದ ಸಾಹಿತ್ಯದ ನಿರ್ಮಾಣಕ್ಕೆ ಸಹೃದಯರೂ, ಗುಣಗ್ರಾಹಿಗಳೂ ಆದ ವಿಮರ್ಶಕರು ಬೇಕು.

ರಸಗ್ರಾಹಿಗಳಾದ ವಾಚಕವೃಂದವೂ ಅಗತ್ಯ. ಅದಿಲ್ಲವಾದಲ್ಲಿ ನೀರನ್ನೇ ಹಾಲೆಂದು ಭ್ರಮಿಸುವ ಸ್ಥಿತಿಯೊದಗೀತು.

ಕಡೆಂಗೋಡ್ಲು ಅವರ ಕೃತಿಗಳ ಅಭ್ಯಾಸದಿಂದ ಸಾಹಿತ್ಯ ಸೃಷ್ಟಿಗೆ ಸಂಸ್ಕೃತದ ಜ್ಞಾನ ಅಗತ್ಯ ಎಂಬ ಅರಿವು ಆಗದಿರದು. ಶಬ್ದ ಸಂಪತ್ತು, ಅನುಭವ ಸಂಪತ್ತು ಅಪರಿಹಾರ್ಯವಾದ ಸಲಕರಣೆ ಎಂದೆನಿಸದಿರದು. ಬರೆದುದನ್ನು ಅಚ್ಚಿನಲ್ಲಿ ಕಾಣುವ ಆಸೆಗಿಂತಲೂ, ಹೆಚ್ಚಿನ ಪ್ರಮಾಣದಲ್ಲಿ ಬರೆದುದನ್ನು ಹರಿಯು ವುದರಲ್ಲಿ ಆಸಕ್ತಿ ಹೆಚ್ಚಬೇಕು.

ನಮ್ಮಲ್ಲಿ ಶಂಕರ ಭಟ್ಟರಂತಹ ದೊಡ್ಡ ಬದುಕನ್ನು ನಡೆ ಸುವ ಧೃತಿ ಬರಬೇಕು. ಅಂತಹ ಬದುಕನ್ನು ನಡೆಸುವವರಿಗೆ ಶಾರದೆ ಒಲಿಯುತ್ತಾಳೆ. ಅವರ ನಾಲಿಗೆಯಲ್ಲಿ ನಲಿಯುತ್ತಾಳೆ. ಅವರ ಅಂತರಂಗದಲ್ಲಿ ಭಾವತರಂಗಗಳನ್ನು ಉಕ್ಕಿಸುತ್ತಾಳೆ. ಶಂಕರ ಭಟ್ಟರ ಬದುಕೂ—ಬರೆಹಗಳೂ ನಮಗೆ ಸ್ಫೂರ್ತಿಯ ಕೇಂದ್ರವಾಗಿ ಉಳಿಯಲಿ. ಅವರ ಕೃತಿಗಳ ಅಭ್ಯಾಸ ಅವ್ಯಾಹತ ವಾಗಿ ಅನಂತಕಾಲದ ವರೆಗೆ ನಡೆದು ಬರಲಿ. ಈ ಪೀಳಿಗೆಯವ ರಾದ ನಮಗೆ ಅದು ಅಂತಃಸ್ಫೂರ್ತಿಯನ್ನು ಕೊಡಲಿ. ಭವ್ಯವೂ-ದಿವ್ಯವೂ ಆದ ರಚನೆಗೆ ಚೇತನ ನೀಡಲಿ. ಶಂಕರ ಭಟ್ಟ ರನ್ನು ಅಭಿಮಾನದಿಂದ, ಹೆಮ್ಮೆಯಿಂದ ನಮ್ಮವರೆಂದು ಹೇಳಿ ಕೊಳ್ಳುವ! ಹೇಳಿಕೊಳ್ಳುವ ಅರ್ಹತೆಯುಳ್ಳ ಬಾಳನ್ನು ನಡೆಸುವ!

ನವೋದಯ
ಪ್ರಚಾರ ಪುಸ್ತಕ ಮಾಲೆ

ಅಚ್ಚಾದುವು:

ಕಲಾವಿದ ಕೃಷ್ಣ ಹೆಬ್ಬಾರರು
ಬೇಂದ್ರೆ
ಕಾರ್ಲ್ ಮಾರ್ಕ್ಸ್
ಶಿವರಾಮ ಕಾರಂತ
ಶ್ರೀ ಪು. ತಿ. ನರಸಿಂಹಾಚಾರ್ಯರು
ಟಿ. ಎಸ್. ಈಲಿಯಟ್
ಮಾಸ್ತಿ ವೆಂಕಟೇಶ ಅಯ್ಯಂಗಾರ್
ಕಡೆಂಗೋಡ್ಲು ಶಂಕರ ಭಟ್ಟರು
ಶ್ರೀರಂಗ
ಅ. ನ. ಕೃಷ್ಣರಾಯರು
ಬದುಕುವ ದಾರಿ
ಶ್ರೀ ಕೃಷ್ಣ ದೌತ್ಯ
ಶ್ರೀ ಪುರಂದರ ದಾಸರು
ಸೇಡಿಯಾಪು ಕೃಷ್ಣ ಭಟ್ಟರು
ಮುದ್ದಣ
ಗೋವಿಂದ ಪೈ ಕಾವ್ಯಗಳು
ವಿ. ಸೀ.
ಹುರುಳಿ ಭೀಮರಾಯರು

ಅಚ್ಚಿನಲ್ಲಿ:

ಉಗ್ರಾಣ ಮಂಗೇಶರಾಯರು
ಕನ್ನಡ ಕಟ್ಟಿದವರು
ಮುಳಿಯ ತಿಮ್ಮಪ್ಪಯ್ಯ
ಎಸ್. ವೆಂಕಟರಾಜ
ಪಂಜೆ ಮಂಗೇಶರಾಯರು
ಕೈಯಾರ ಕಿಞ್ಞಣ್ಣ ರೈ

ನವಯುಗ ಪ್ರೆಸ್, ಉಡುಪಿ.